# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 02-06-2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಜಂಟಿ ನಿರ್ದೇಶಕರು ನಗರ ಯೋಜನೆ (ದಕ್ಷಿಣ) ಕಛೇರಿಯ ಅನಿರೀಕ್ಷಿತ ತಪಾಸಣಾ ವರದಿ

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಎನ್. ಶಾಂತಕುಮಾರಿ | ಸದಸ್ಯರು | ವಿಶೇಷ ಅಧಿಕಾರಿ |
| 3 | ಮೋಹನ್ ಕುಮಾರ್ | ಸದಸ್ಯರು | ಆಯುಕ್ತರ ಕಛೇರಿ ನೋಡಲ್ ಅಧಿಕಾರಿಗಳು |
| 4 | ಎಸ್.ಎಂ. ಮುರುಗೇಶ್ ಮೊದಲಿಯರ್ | ಸದಸ್ಯರು | |
| 5 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 6 | ನಾಜಿನಿ ಬೇಗಂ | ಸದಸ್ಯರು | |
| 7 | ಭುವನೇಶ್ವರಿ | ಸದಸ್ಯರು | |
| 8 | ಎಲ್.ನಾಗರತ್ನ | | |

ಈ ದಿವಸ ಬೆಳಿಗ್ಗೆ 10.30 ರ ಸಮಯಕ್ಕೆ ಜಂಟಿ ನಿರ್ದೇಶಕರು (ನಗರ ಯೋಜನೆ) ದಕ್ಷಿಣ ಕಛೇರಿಗೆ ಸಮಿತಿಯು ತಪಾಸಣೆ ಕೈಗೊಂಡಿದ್ದು, ಈ ಸಂದರ್ಭದಲ್ಲಿ 20 ಜನ ಅಭಿಯಂತರರುಗಳ ಪೈಕಿ ಕೇವಲ 3 ಜನ ಮಾತ್ರ ಸಹಿ ಮಾಡಿದ್ದು ಇತರೆ ಯಾವೊಬ್ಬ ಸಿಬ್ಬಂದಿ ವರ್ಗದವರು ಕಛೇರಿಗೆ ಹಾಜರಾಗಿರುವುದಿಲ್ಲ ಹಾಗೂ ಈ ಸಂಬಂಧ ಕಛೇರಿಯ ಚಲನ ವಲನ ಪುಸ್ತಕದಲ್ಲಿ ಯಾವುದೇ ವಿಧವಾದ ಸ್ಪಷ್ಟ ದಾಖಲಾತಿಗಳು ಇರುವುದಿಲ್ಲ. ಕಛೇರಿಯ ಚಲನ ವಲನ ಪುಸ್ತಕವನ್ನು ಪರಿಶೀಲಿಸಲಾಗಿ, ಸದರಿ ಪುಸಕವು ಇಲಾಖಾ ಮುಖ್ಯಸ್ಥರ ದೃಢೀಕರಣವಿಲ್ಲದೇ ಇರುವುದು ಕಂಡು ಬಂದಿರುತ್ತದೆ. ಆ ನಂತರ ತಡವಾಗಿ ಹಾಜರಾದ ಅಧಿಕಾರಿಗಳು/ಸಿಬ್ಬಂದಿಗಳು ಯಾರೊಬ್ಬರು ಗುರುತಿನ ಚೀಟಿ ಹೊಂದದೇ ಇರುವುದು ಸ್ಪಷ್ಟವಾಗಿರುತ್ತದೆ ಹಾಗೂ ತಡವಾಗಿ ಬಂದ ಅಧಿಕಾರಿಗಳು/ಸಿಬ್ಬಂದಿಗಳು ಸಕಾರಣವನ್ನು ನೀಡಲು ವಿಫಲರಾಗಿರುತಾರೆ.

ಕೆಲವು ಅಧಿಕಾರಿಗಳು ಧರಿಸಿರುವ ಗುರುತಿನ ಚೀಟಿಯಲ್ಲಿ ಹಿಂದಿನ ಆಯುಕ್ತರ ಸಹಿ ಇರುವುದು ಕಂಡುಬಂದಿದ್ದು, ಈ ಬಗ್ಗೆ ವಿವರಣೆ ಕೊಡಲಾಗಿ ಇವರುಗಳ ಪೈಕಿ ಕೆಲವು ಅಧಿಕಾರಿಗಳು ಈ ಹಿಂದೆ ಪಾಲಿಕೆಗೆ ನಿಯೋಜನೆ ಮೇಲೆ ಬಂದಿದ್ದು, ಸದರಿ ನಿಯೋಜನೆ ಪೂರ್ಣಗೊಂಡು ಮಾತೃ ಇಲಾಖೆಗೆ ಹಿಂತಿರುಗಿದ್ದು, ಪುನ: ಮರು ನಿಯೋಜನೆ ಮೇರೆಗೆ, ಪಾಲಿಕೆಯಲ್ಲಿ ಹಾಜರಾತಿ ನೀಡಿದ್ದು, ಈ ಹಿಂದೆ ನೀಡಿದಂತಹ ಗುರುತಿನ ಚೀಟಿಯನ್ನೇ ತಹಲ್‌ವರೆಗೂ ಉಪಯೋಗಿಸುತ್ತಿದ್ದು, ಈ ಗುರುತಿನ ಚೀಟಿಯ ಸಿಂಧುತ್ವದ ಬಗ್ಗೆ ಸಂಶಯ ಉಂಟಾಗಿರುತ್ತದೆ. ಈ ಬಗೆಗೂ ಸಹ ಬಟವಾಡೆ ಅಧಿಕಾರಿಗಳು ಸೂಕ್ತ ನಿಗಾವಹಿಸಿ ಹೊಸದಾಗಿ ಗುರುತಿನ ಚೀಟಿ ವಿತರಿಸಲು ಕ್ರಮಕೈಗೊಳ್ಳತಕ್ಕದ್ದು.

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ [illegible]

[illegible]

ಮುಂದುವರೆದಂತೆ, ಈ ತಪಾಸಣೆ ಕಾರ್ಯವನ್ನು ದಿನಾಂಕ:04-06-2012 ರಂದು ಬೆಳಿಗ್ಗೆ 10-00 ಘಂಟೆಗೆ ಮುಂದುವರೆಸಲು ಸಹ ಸೂಚಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಜಂಟಿ ನಿರ್ದೇಶಕರು (ನಗರ ಯೋಜನೆ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
8. ಕಛೇರಿ ಪ್ರತಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 04–06–2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಆಯುಕ್ತರ ಕಛೇರಿಯ ಅನಿರೀಕ್ಷಿತ ತಪಾಸಣಾ ವರದಿ

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಕೆ. ರವೀಂದ್ರನ್ | ಸದಸ್ಯರು | ವಿಶೇಷ ಅಧಿಕಾರಿ |
| 3 | ಮೋಹನ್ ಕುಮಾರ್ | ಸದಸ್ಯರು | |
| 4 | ಎಸ್.ಎಂ. ಮುರುಗೇಶ್ ಮೊದಲಿಯರ್ | ಸದಸ್ಯರು | |
| 5 | ನಾಜಿನಿ ಬೇಗಂ | ಸದಸ್ಯರು | |
| 6 | ಭುವನೇಶ್ವರಿ | ಸದಸ್ಯರು | |
| 7 | ಎಲ್.ನಾಗರತ್ನ | ಸದಸ್ಯರು | |

ಸಮಿತಿಯು ಈ ದಿವಸ ಬೆಳಿಗ್ಗೆ ಸುಮಾರು 11–00 ಘಂಟೆಗೆ ಮುಖ್ಯ ಕಚೇರಿಯಲ್ಲಿರುವ ಆಯುಕ್ತರ ಆಡಳಿತ ಶಾಖೆಗೆ ತಪಾಸಣೆ ಕೈಗೊಂಡಿದ್ದು, ಆ ಸಂದರ್ಭದಲ್ಲಿ ಸದರಿ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಪೈಕಿ ಕೆಲವು ನೌಕರರುಗಳು ಗುರುತಿನ ಚೀಟಿ ಧರಿಸದೇ ಕಾರ್ಯನಿರ್ವಹಿಸುವುದು ಕಂಡು ಬಂದಿದ್ದು, ಅವರುಗಳನ್ನು ವಿಚಾರಿಸಲಾಗಿ, ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ ಹೊರ ಗುತ್ತಿಗೆ ಅಧಾರದ ಮೇಲೆ ನೇಮಕ ಹೊಂದಿರುವುದಾಗಿ ತಿಳಿಸಿ, ತಮಗಳಿಗೆ ಗುರುತಿನ ಚೀಟಿಯನ್ನು ತಹಲ್‌ವರೆವಿಗೂ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ, ಹಾಜರಿದ್ದಂತಹ ಸಹಾಯಕ ಆಯುಕ್ತರು (ಆಡಳಿತ) ರವರು ಸಹ ಈ ಬಗ್ಗೆ ವಿವರಣೆ ನೀಡಲು ವಿಫಲರಾಗಿರುತ್ತಾರೆ. ಈಗಾಗಲೇ, ಕಿಯೋನಿಕ್ಸ್ ಸಂಸ್ಥೆಗೆ ನೀಡಿರುವ ಗುತ್ತಿಗೆ ಅವಧಿಯು ಪೂರ್ಣಗೊಂಡಿದ್ದು, ಮುಂದಿನ ಜುಲೈವರೆವಿಗೂ ಸದರಿ ಗುತ್ತಿಗೆಯನ್ನು ಮುಂದುವರೆಸಲು ಆಯುಕ್ತರು ಆದೇಶಿಸಿರುವುದಾಗಿ ತಿಳಿಸಿರುತ್ತಾರೆ.

ಶ್ರೀ. ಮೋಹನ್ ಕುಮಾರ್, ಸದಸ್ಯರು ರವರು ಹಾಲಿ ಪಾಲಿಕೆಯಲ್ಲಿ ಎಷ್ಟು ಸಂಖ್ಯೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಿಯೋನಿಕ್ಸ್ ಸಂಸ್ಥೆಯಿಂದ ಗಣಕ ಯಂತ್ರ ಸಹಾಯಕರು (Data Entry Operator) ಕಾರ್ಯನಿರ್ವಹಿಸುತ್ತಿರುವುದಾಗಿ ವಿವರಿಸಲು ತಿಳಿಸಿದ್ದು, ಈ ಬಗೆಗೂ ಸಹ ಸಹಾಯಕ ಆಯುಕ್ತರು (ಆಡಳಿತ) ರವರು ಪರಿಶೀಲಿಸಿ, ಕಡತವನ್ನು ಸಮಿತಿಗೆ ಮಂಡಿಸುವುದಾಗಿ ತಿಳಿಸಿರುತ್ತಾರೆ.

ಶ್ರೀ. ಮುರುಗೇಶ್ ಮೊದಲಿಯಾರ್ ರವರು ಮಹಾನಗರ ಪಾಲಿಕೆ ಕಛೇರಿಗಳಲ್ಲಿ ಕಿಯೋನಿಕ್ಸ್ ಸಂಸ್ಥೆಯಿಂದ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರುಗಳ ಪೈಕಿ ಯಾರೊಬ್ಬರ ಬಳಿಯೂ ಅಗತ್ಯ ಮಾಹಿತಿಯು ಇಲ್ಲದೇ ಇದ್ದು, ಇದರಲ್ಲಿ ಅಧಿಕೃತ ಹಾಗೂ ಅನಧಿಕೃತ ಯಾರೆಂಬುದನ್ನು

ವಿವರಗಳಿಗೆ ಸಂಬಂಧಪಟ್ಟ ಅಗತ್ಯ ದಾಖಲೆಗಳೊಂದಿಗೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಿರತಕ್ಕದ್ದೆಂದು ಸೂಚಿಸುತ್ತಾ, ತಪಾಸಣೆಯನ್ನು ಪೂರ್ಣಗೊಳಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ
3. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಉಪ ಆಯುಕ್ತರು (ಆಡಳಿತ) ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.
7. ಕಛೇರಿ ಪ್ರತಿ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ದಿನಾಂಕ: 14-06-2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಪರ ಆಯುಕ್ತರು (ಆಡಳಿತ) |
| 2 | ನಾಜಿನಿ ಬೇಗಂ | ಸದಸ್ಯರು | ಜಂಟಿ ಆಯುಕ್ತರು (ಭೂಸ್ವಾಧೀನ) |
| 3 | ಮೋಹನ್ ಕುಮಾರ್ | ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| 4 | ಜೆ. ಭುವನೇಶ್ವರಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 5 | ಎಲ್.ನಾಗರತ್ನ | ಸದಸ್ಯರು | ವಿಶೇಷ ಅಧಿಕಾರಿ |
| 6 | ರವೀಂದ್ರನ್ ಕೆ | ಸದಸ್ಯರು | |
| 7 | ಎನ್. ಶಾಂತಕುಮಾರಿ | ಸದಸ್ಯರು | |
| 8 | ಎಸ್.ಎಂ. ಮುರುಗೇಶ್ ಮೊದಲಿಯಾರ್ | ಸದಸ್ಯರು | |
| 9 | ಅಬ್ದುಲ್ ರಖೀಬ್ ಝುಕೀರ್ | ಸದಸ್ಯರು | |
| 10 | ರಾಜಣ್ಣ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ ಸಂಖ್ಯೆ: ಸಿಆಸುಸ್ಥಾಸ/01/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್ (ದಂಡು ಪ್ರದೇಶ) ರವರ ಬೇಡಿಕೆಗಳ ಕುರಿತು ಮಾನ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ದಿ: 25-06-2011 ರಂದು ಪಾಲಿಕೆಯ ಕೇಂದ್ರ ಕಛೇರಿ ಸಭಾಂಗಣ-1 ರಲ್ಲಿ ನಡೆದ ಸಭೆಯ ನಡವಳಿಕೆಯಲ್ಲಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ಚರ್ಚಿಸಲಾಗಿದ್ದು, ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಪೌರಕಾರ್ಮಿಕರನ್ನು ಮಾನ್ಯ ಆಯುಕ್ತರ ಆದೇಶ ಸಂಖ್ಯೆ:.ಬಿ12(5ಜಿ)ಪಿಆರ್-441/98-99 ದಿನಾಂಕ: 23/12/1998 ರಂತೆ 45 ಪೌರಕಾರ್ಮಿಕರನ್ನು ಖಾಯಂಗೊಳಿಸಿರುವಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ 193 ಸಮಾನ ಕೆಲಸಕ್ಕೆ ಸಮಾನ ವೇತನದಲ್ಲಿ ಕಳೆದ 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ದಿನಗೂಲಿ ನೌಕರರು ಮರಣ ಹೊಂದಿದ್ದಲ್ಲಿ ಅನುಕಂಪದ ಆಧಾರದಲ್ಲಿ ನೌಕರಿ ನೀಡಲು ಖಾಯಂಗೊಳಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಜೊತೆಗೆ ಸದರಿ ನೌಕರರನ್ನು ಹೊಸದಾಗಿ ಸೃಷ್ಟಿಸಲಾಗಿರುವ 4000 ಪೌರಕಾರ್ಮಿಕರ ಹುದ್ದೆಗಳಲ್ಲಿ ಪರಿಗಣಿಸಬೇಕೆಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

(ದಂಡು ಪ್ರದೇಶ) ರವರು ತಿಳಿಸಲಾದ ಮೇರೆಗೆ, ಸದರಿ ಪ್ರಸ್ತಾವನೆಯನ್ನು ಈಗಾಗಲೇ ದಿ: 09-11-2010 ರ ನಡವಳಿಯಂತೆ ಕ್ರಮ ಕೈಗೊಳ್ಳಲಾಗಿದ್ದು, ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು 10 ದಿನಗಳಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದ ಅಧಿಸೂಚಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ನಗರ ಪಾಲಿಕೆ ವಶಕ್ಕೆ ಹಸ್ತಾಂತರಿಸಿದ ಮೇರೆಗೆ, ಸದರಿ ಅಧಿಸೂಚಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳ ಪೈಕಿ 45 ನೌಕರರುಗಳ ದಿನಾಂಕ:01/01/1986 ರ ಮುಂಚೆ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಸತತ 10 ವರ್ಷಗಳ ಸೇವೆಯನ್ನು ಪೂರೈಸಿದ್ದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಯು.ಡಿ./31/ಎಂಎನ್‌ಯು/93 ದಿನಾಂಕ:21/08/1995 ರ ಆದೇಶದಂತೆ ಸದರಿ 45 ಮಂದಿ ನೌಕರರುಗಳನ್ನು ಕ್ರಮಬದ್ಧಗೊಳಿಸಲಾಗಿರುತ್ತದೆ. ಇನ್ನುಳಿದ ನೌಕರರುಗಳು ಸಮಾನ ಕೆಲಸಕ್ಕೆ ಸಮಾನ ವೇನತವನ್ನು ಪಡೆದು ಪಾಲಿಕೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ವಲಯಗಳಲ್ಲಿ 193 ಮಂದಿ ಎನ್.ಎಂ.ಆರ್ ಪೌರಕಾರ್ಮಿಕರು ಮತ್ತು 19 ಮಂದಿ ಎನ್.ಎಂ.ಆರ್ ದಿನಗೂಲಿ ನೌಕರರುಗಳು ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟಿದ್ದ ಅಧಿಸೂಚಿತ ಪ್ರದೇಶಗಳಿಂದ ಮುಂದುವರೆದು ಸುಮಾರು 10-20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. ತದನಂತರ ಸದರಿ ಎನ್.ಎಂ.ಆರ್ ನೌಕರರುಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್.ಯು.ಡಿ/31/ಎಂಎನ್‌ಯು/93 ದಿನಾಂಕ: 21/08/1995ರ ಆದೇಶದಂತೆ ಸಕ್ರಮಗೊಳಿಸಲು ಈ ಕಛೇರಿ ಪತ್ರ ಸಂಖ್ಯೆ:ಬಿ12(5ಜಿ) ಪಿಆರ್/257/00-01 ದಿನಾಂಕ: 22/02/2007 ರ ಪತ್ರದಲ್ಲಿ ಸರ್ಕಾರವನ್ನು ಕೋರಲಾಗಿರುತ್ತದೆ. ಆದರೆ ಸದರಿ ನೌಕರರುಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಿಂದ ಯಾವುದೇ ಅನುಮೋದನೆ ಬಂದಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಹೆಚ್.ಯು.ಡಿ/31/ಎಂಎನ್‌ಯು/93 ದಿನಾಂಕ:21/08/1995 ರ ಆದೇಶದಲ್ಲಿ ದಿನಾಂಕ:01/01/1986 ರ ಮುಂಚಿತವಾಗಿ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿರುವ ನೌಕರರುಗಳನ್ನು ಸದರಿಯವರುಗಳು 10 ವರ್ಷಗಳ ಸೇವೆಯನ್ನು ನಿರಂತರವಾಗಿ ಪೂರೈಸಿದ್ದ ಪಕ್ಷದಲ್ಲಿ ಅಂತಹ ನೌಕರರುಗಳನ್ನು ಕ್ರಮಬದ್ಧಗೊಳಿಸಲು ಅವಕಾಶವಿರುತ್ತದೆ. ಆದರೆ, ಪ್ರಸುತ್ತ 193 ಮಂದಿ ಎನ್.ಎಂ.ಆರ್ ಪೌರಕಾರ್ಮಿಕರು ಮತ್ತು 19 ಮಂದಿ ಎನ್.ಎಂ.ಆರ್ ದಿನಗೂಲಿ ನೌಕರರುಗಳ ಪೈಕಿ ಕೆಲವು ಮಂದಿ ನೌಕರರುಗಳನ್ನು ಹೊರತುಪಡಿಸಿ ಉಳಿದೆಲ್ಲಾ ನೌಕರರುಗಳು ದಿನಾಂಕ: 01/01/1986 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸಲಾಗಿರುವ 7 ನಗರ ಸಭೆಗಳು ಒಂದು ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಜಿಲ್ಲಾಧಿಕಾರಿಗಳು ಸಕ್ರಮಗೊಳಿಸಿದ್ದು ಸದರಿ ನೌಕರರುಗಳನ್ನು ಸಕ್ರಮಗೊಳಿಸಿರುವುದು ಸರ್ಕಾರದ ಆದೇಶ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಂಖ್ಯೆ: ಹೆಚ್.ಯು.ಡಿ/31/ಎಂಎನ್‌ಯು/93, ದಿನಾಂಕ: 21/08/1995 ರ ಆದೇಶದ ವಿರುದ್ದವಾಗಿದ್ದರಿಂದ ಈ ಕಛೇರಿ ಪತ್ರದ ಸಂಖ್ಯೆ: ಬಿ12(1)ಪಿಆರ್/54/07-08 ದಿನಾಂಕ:18/12/2007 ರ ರೀತ್ಯಾ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾದಂತೆ ಸರ್ಕಾರವು ಜಿಲ್ಲಾಧಿಕಾರಿಗಳು ರವರ ಸ್ಪಷ್ಟೀಕರಣ ಪಡೆದಿದ್ದು, ಜಿಲ್ಲಾಧಿಕಾರಿ ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸಕ್ರಮಗೊಳಿಸಲಾಗಿರುತ್ತದೆಯೆಂದು ತಿಳಿಸಿರುವುದರಿಂದ ಸದರಿ ನೌಕರರುಗಳನ್ನು ಸಕ್ರಮಗೊಳಿಸಲು ಕ್ರಮ ಜರುಗಿಸುವಂತೆ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ನಅಇ/729/ಎಂಎನ್‌ವೈ/2007 ಬೆಂಗಳೂರು ದಿನಾಂಕ: 13/05/2011 ರ ಆದೇಶದಲ್ಲಿ ನಿರ್ದೇಶನ ನೀಡಿರುತ್ತದೆ. ಅದರಂತೆ ಸದರಿ 7 ನಗರ ಸಭೆಗಳು ಒಂದು ಪುರಸಭೆಯಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರುಗಳನ್ನು ಸರ್ಕಾರವು ಸಕ್ರಮಗೊಳಿಸಿ ಪಾಲಿಕೆಯಲ್ಲಿ ವಿಲೀನಗೊಳಿಸಿರುತ್ತದೆ. ಸದರಿ ಸರ್ಕಾರದ ನಿರ್ದೇಶನದಂತೆ ಸದರಿ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲಾಗಿರುತ್ತದೆ.

ಈ ಮಧ್ಯೆ ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವರ್ಕರ್ಸ್ ಫೆಡರೇಷನ್ (ದಂಡು ಪ್ರದೇಶ) ರವರು ಪತ್ರ ಬರೆದು 7 ನಗರ ಸಭೆಗಳು ಒಂದು ಪುರಸಭೆಯಲ್ಲಿ ದಿನಾಂಕ:01/01/1986 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಜಿಲ್ಲಾಧಿಕಾರಿಗಳು ರವರು ಸಕ್ರಮಗೊಳಿಸಿರುವಂತೆ ಸರ್ಕಾರವು ಅನುಮೋದನೆ ನೀಡಿರುವುದರಿಂದ ಪ್ರಸ್ತುತ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 193 ಮಂದಿ ಎನ್.ಎಂ.ಆರ್. ಪೌರಕಾರ್ಮಿಕರು ಮತ್ತು 19 ಮಂದಿ ಎನ್.ಎಂ.ಆರ್. ದಿನಗೂಲಿ ನೌಕರರುಗಳನ್ನು ಸಹ ಕ್ರಮಬದ್ದಗೊಳಿಸಲು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ 7 ನಗರ ಸಭೆಗಳು ಒಂದು ಪುರಸಭೆಯಲ್ಲಿ ದಿನಾಂಕ:01/01/1986 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಜಿಲ್ಲಾಧಿಕಾರಿಗಳು ರವರು ಸಕ್ರಮಗೊಳಿಸಿರುವಂತೆ ಪಾಲಿಕೆಯಲ್ಲಿ ದಿನಾಂಕ: 01/01/1986 ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ 193 ಮಂದಿ ಎನ್.ಎಂ.ಆರ್ ಪೌರಕಾರ್ಮಿಕರು ಮತ್ತು 19 ಮಂದಿ ಎನ್.ಎಂ.ಆರ್ ದಿನಗೂಲಿ ನೌಕರರುಗಳನ್ನು ಸಹ ಕ್ರಮಬದ್ದಗೊಳಿಸುವ ಬಗ್ಗೆ ತೀರ್ಮಾನಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ: 09-04-2012ರ ಸಂಖ್ಯೆ: ಬಿ12(5ಜಿ)ಪಿಆರ್/257/00-01/2011-12 ರ ಟಿಪ್ಪಣಿ.

**ನಿರ್ಣಯ:**

ಈ ಕೆಳಕಂಡ ಅವಲೋಕನೆ ಕುರಿತಂತೆ ವಿವರವಾದ ವರದಿಯೊಂದಿಗೆ ಮರು ಮಂಡಿಸಲು ಹಿಂದಿರುಗಿಸಿದೆ.

*"ದಿನಗೂಲಿ ನೌಕರರ ಕ್ರಮ ಬದ್ಧತೆಗೆ ಕುರಿತಂತೆ ಸರ್ಕಾರದ ದಿನಾಂಕ:15.11.2006ರ ನ.ಅ.ಇ 95ಬಿಎಂಎಸ್ 05(P-II) ಅಧಿಕೃತ ಜ್ಞಾಪನದಲ್ಲಿ ತಿಳಿಸಿರುವ ಷರತ್ತುಗಳಿಗೆ ಬದ್ಧವಾಗಿದೆಯೆ"* ಎಂಬ ಬಗ್ಗೆ ಸ್ಪಷ್ಟೀಕರಣದೊಂದಿಗೆ ದೃಢೀಕೃತ ವರದಿ ನೀಡತಕ್ಕದ್ದು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಿಷಯ ಸಂಖ್ಯೆ: ಸಿಆಸುಸ್ಥಾಸ/02/2012-13

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಕ್ತ ಸಿಬ್ಬಂದಿ ಇಲ್ಲದ ಕಾರಣ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು ಮತ್ತು ಸರ್ವೇಯರ್‌ಗಳನ್ನು ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 20 (ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03-03-2010 ರಂದು ನೇಮಕ ಮಾಡಿಕೊಳ್ಳಲಾಗಿತ್ತು. ಈ ಹುದ್ದೆಗಳಿಗೆ ಸರ್ಕಾರವು ಅನುಮೋದನೆ ನೀಡಿದ್ದು ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ನೇಮಕ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಆಯುಕ್ತರು | 16,000 | 3 |
| 2 | ತಹಶೀಲ್ದಾರ್‌ರು | 14,000 | 4 |
| 3 | ಶಿರಸ್ತೇದಾರ್‌ರು | 12,000 | 4 |
| 4 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 8 |
| 5 | ಮೋಜಣಿದಾರರು | 10,000 | 8 |
| 6 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 8 |

ಮೇಲ್ಕಂಡ ಸರ್ಕಾರದ ಆದೇಶದಂತೆ ಆಯ್ಕೆ ಪ್ರಕ್ರಿಯೆ ನಡೆಸಿ ಒಟ್ಟು 36 ಮಂದಿ ಗುತ್ತಿಗೆ ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದು, ಅವರಲ್ಲಿ ಕರ್ತವ್ಯಕ್ಕೆ ಹಾಜರಾದ 32 ಮಂದಿಯನ್ನು ಬಿಬಿಎಂಪಿ ಯ 8 ವಲಯಗಳಿಗೆ ಅವಶ್ಯಕತೆಗನುಸಾರ ನಿಯೋಜನೆ ಮಾಡಲಾಗಿತ್ತು. ಅವರ ಗುತ್ತಿಗೆ ಅವಧಿಯು ದಿ: 02-03-2011 ಕ್ಕೆ ಮುಕ್ತಾಯಗೊಂಡಿದ್ದು, ವಲಯಗಳಿಂದ ಪಡೆದ ವರದಿ ಮತ್ತು ಟಿ.ಡಿ.ಆರ್ ಯೋಜನೆಯಲ್ಲಿನ ಪ್ರಗತಿ ಪರಿಶೀಲನೆ ಮಾಡಿ 2011-12 ನೇ ಸಾಲಿಗೆ ಸದರಿ ಹುದ್ದೆಗಳನ್ನು 24 ಕ್ಕೆ ಕಡಿತಗೊಳಿಸಿ ಮುಂದುವರೆಸುವ ಬಗ್ಗೆ ಸರ್ಕಾರದ ಅನುಮೋದನೆ ಪಡೆಯಲಾಗಿತ್ತು ಹಾಗೂ ಈ ಅವಧಿಯಲ್ಲಿ ಕೆಲವು ಗುತ್ತಿಗೆ ಸಿಬ್ಬಂದಿ ವೈಯಕ್ತಿಕ ಕಾರಣದ ಮೇಲೆ ರಾಜೀನಾಮೆ ನೀಡಿದ್ದು ಮತ್ತು ಕೆಲವರನ್ನು ಅವರ ಕಾರ್ಯಪ್ರಗತಿಯು ತೃಪ್ತಿಕರವಾಗಿಲ್ಲದ್ದರಿಂದ ಪಾಲಿಕೆಯಿಂದ ಬಿಡುಗಡೆಗೊಳಿಸಲಾಗಿತ್ತು. ಅದರಂತೆ 2011-12ನೇ ಸಾಲಿಗೆ ಗುತ್ತಿಗೆ ಅವಧಿಯು ಮುಕ್ತಾಯಗೊಂಡಂತೆ ಅಂದರೆ ದಿ:02-03-2012 ರಂತೆ ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗದಲ್ಲಿ ಕೇವಲ 14 ಮಂದಿ ಗುತ್ತಿಗೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಿವೃತ್ತ ಅಧಿಕಾರಿ/ನೌಕರರುಗಳ ಗುತ್ತಿಗೆ ಅವಧಿಯು ದಿ: 02-03-2012 ಕ್ಕೆ ಮುಕ್ತಾಯಗೊಂಡಿದ್ದು, ಹೊಸ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಅಥವಾ ಕರ್ನಾಟಕ ಆರ್ಥಿಕ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಂಹಿತೆ ನಿಯಮ 80 (ಎ) ಈ1) ಮತ್ತು (2) ರಲ್ಲಿ ಅವಕಾಶವಿರುವಂತೆ ಮುಂದಿನ ತಿಂಗಳ ಅವಧಿಗೆ ಅಂದರೆ ದಿ: 31–05–2012 ರವರೆಗೆ ಗುತ್ತಿಗೆ ಸೇವೆಯಲ್ಲಿ ಮುಂದುವರೆಸಲಾಗಿದೆ.

ಹಾಗೂ ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು, ಸರ್ವೇಯರ್ ಗಳನ್ನು ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಕೆಯ ಎಲ್ಲಾ 8 ವಲಯಗಳಲ್ಲಿನ ಅಪರ/ಜಂಟಿ ಆಯುಕ್ತರುಗಳಿಂದ ವರದಿ ಪಡೆದು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯದ ಪ್ರಗತಿ ಬಗ್ಗೆ ಈ ಕೆಳಕಂಡಂತೆ ಪರಿಶೀಲನೆ ಮಾಡಲಾಗಿದೆ.

1. **ಯಲಹಂಕ ವಲಯ :-** ಈ ವಲಯದಲ್ಲಿ ಹಾಲಿ ಒಬ್ಬ ತಹಶೀಲ್ದಾರ್, ರಾನಿ/ಪ್ರ.ದ.ಸ. ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 7 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 3,000 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 322 ಮತ್ತು 96 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ವಲಯದ ಜಂಟಿ ಆಯುಕರು ತಮ್ಮ ವರದಿಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರ್/ರಾನಿ/ಪ್ರ.ದ.ಸ. ಹಾಗೂ ನಿವೃತ್ತ ಸರ್ವೇಯರ್‌ನ್ನು ಮುಂದುವರೆಸುವಂತೆಯೂ ಹಾಗೂ ಹೆಚ್ಚುವರಿಯಾಗಿ ಒಬ್ಬ ನಿವೃತ್ತ ಸರ್ವೇಯರ್ ಹುದ್ದೆ ನೀಡುವಂತೆ ಕೋರಿರುತ್ತಾರೆ. ಈ ವಲಯಕ್ಕೆ ಒಬ್ಬ ತಹಶೀಲ್ದಾರ್ ಒಬ್ಬರು ಕಂದಾಯ ನಿರೀಕ್ಷಕರು ಮತ್ತು ಇಬ್ಬರು ಸರ್ವೇಯರ್‌ಗಳನ್ನು ನೇಮಕಗೊಳಿಸಬಹುದಾಗಿದೆ.

2. **ಮಹದೇವಪುರ ವಲಯ :-** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 11 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 4,187 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 173 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ದೂರವಾಣಿ ಕರೆ ಮಾಡಿ ಹಾಲಿ ಕರ್ತವ್ಯನಿರತ ತಹಶೀಲ್ದಾರ್/ಗ್ರಾಮ ಲೆಕ್ಕಿಗ ಹಾಗೂ ನಿವೃತ್ತಸರ್ವೇಯರ್‌ಗಳ ಹುದ್ದೆಗಳನ್ನು ಮುಂದುವರಿಸುವಂತೆಯೂ ಹಾಗೂ ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ಸರ್ವೇಯರ್ ಹಾಗೂ ಒಬ್ಬ ಗ್ರಾ.ಲೆ/ದ್ವಿ..ದ.ಸ. ರವರ ಹುದ್ದೆಗಳನ್ನು ನೇಮಕಗೊಳಿಸಬೇಕಾಗಿದೆ.

3. **ದಾಸರಹಳ್ಳಿ ವಲಯ :-** ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 22 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ವಲಯದ ಜಂಟಿ ಆಯುಕ್ತರು ದೂರವಾಣಿ ಮೂಲಕ ತಿಳಿಸಿದ ಮೇರೆಗೆ ಒಬ್ಬರು ರಾನಿ/ಪ್ರ.ದ.ಸ ಹಾಗೂ ಒಬ್ಬರು ಸರ್ವೇಯರ್ ಹುದ್ದೆಯನ್ನು ನೇಮಕಾತಿ ಮಾಡಿಸಿಕೊಳ್ಳಲು ಕೋರಿದ್ದಾರೆ. ಇವರಿಗೆ ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

4. **ಬೊಮ್ಮನಹಳ್ಳಿ ವಲಯ :–** ಈ ವಲಯದಲ್ಲಿ 38 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 13 ರಸ್ತೆಗಳ ಅಗಲೀಕರಣ ಕಾರ್ಯ ಕೈಗೊಂಡಿದ್ದು, ಅಂದಾಜು 314 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಈ ವಲಯದಲ್ಲಿ 14 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು ಸಮರ್ಪಕವಾಗಿರುವದಿಲ್ಲ. ದೂರವಾಣಿ ಮುಖಾಂತರ ವಿಚಾರಿಸಿದ ಮೇರೆಗೆ ಹಾಲಿ ಕರ್ತವ್ಯ ನಿರತ ರಾನಿ/ಪ್ರ.ದ.ಸ ಮತ್ತು ಆಸ್ತಿ ವಿಭಾಗ ಸರ್ವೇಯರ್ ರವರೊಂದಿಗೆ ಹೊಸದಾಗಿ ಶಿರಸ್ತೇದಾರ(1) ನಿವೃತ್ತ ಸರ್ವೇಯರ್(1) ಹಾಗೂ ಗ್ರಾಮಲೆಕ್ಕಿಗ/ದ್ವಿ.ದ.ಸ(1) ಹುದ್ದೆಗಳನ್ನು ನೇಮಕ ಮಾಡಿಸಿ ಕೊಡಲು ಕೋರಿರುತ್ತಾರೆ. ಪ್ರಸ್ತಾವನೆ ನಿರೀಕ್ಷಿಸಲಾಗಿದೆ. ಶಿರಸ್ತೇದಾರ್ ಮತ್ತು ರಾ.ನಿ/ಪ್ರ.ದ.ಸ ಗ್ರಾ.ಲೆ/ದ್ವಿ.ದ.ಸ ಹಾಗೂ ಸರ್ವೇಯರ್ ಹುದ್ದೆ ಹೊಸದಾಗಿ ನೇಮಿಸಿಕೊಡುವಂತೆ ಕೋರಿರುತ್ತಾರೆ. ಇವರಿಗೆ ನಾಲ್ಕು ಸಿಬ್ಬಂದಿಗಳನ್ನು ನೀಡಬಹುದಾಗಿದೆ.

5. **ರಾಜರಾಜೇಶ್ವರಿನಗರ ವಲಯ :–** ಈ ವಲಯದಲ್ಲಿ 17 ರಸ್ತೆಗಳನ್ನು ರಸ್ತೆ ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ದೂರವಾಣಿ ಕರೆ ಮೇಲೆ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ನಿವೃತ್ತ ಸರ್ವೇಯರ್ ಹುದ್ದೆಯ ಜೊತೆಗೆ ಒಬ್ಬರು ತಹಶೀಲ್ದಾರ್, ಶಿರಸ್ತೇದಾರ್(1) ರಾನಿ./ಪ್ರ.ದ.ಸ.(1) ನಿವೃತ್ತಿ ಸರ್ವೇಯರ್ (1) ಗ್ರಾಮ ಲೆಕ್ಕಿಗ(1) ಹೊಸದಾಗಿ ನೇಮಕ ಮಾಡಿಸಿಕೊಡಲು ಕೋರಿದ್ದು ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಆದರೆ ಈ ವಲಯಕ್ಕೆ ಒಬ್ಬ ರಾ.ನಿ/ಪ್ರ.ದ.ಸ ಹಾಗೂ ಒಬ್ಬ ಸರ್ವೇಯರ್ ಒಟ್ಟು ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.

6. **ಪೂರ್ವ ವಲಯ:–** ಈ ವಲಯದಲ್ಲಿ ಒಬ್ಬ ಶಿರಸ್ತೇದಾರ್, ಸರ್ವೆಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 24 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 1,737 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದಲ್ಲಿ 26 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಆದರೆ, ವಲಯ ಜಂಟಿ ಆಯುಕ್ತರಿಂದ ಬಂದಿರುವ ವರದಿ ಪ್ರಕಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಿರಸ್ತೇದಾರ್, ನಿವೃತ್ತಿ ಸರ್ವೇಯರ್ ರವರ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಹಾಲಿ ಇರುವ ಶಿರಸ್ತೇದಾರು ಮತ್ತು ಸರ್ವೇಯರ್ ರವರ ಹುದ್ದೆಯನ್ನು ಮುಂದುವರಿಸಿ ಹೊಸದಾಗಿ ಒಬ್ಬರು ಶಿರಸ್ತೇದಾರ್, ರಾ.ಲೆ/ದ್ವಿ.ದ.ಸ ಹಾಗೂ ಸರ್ವೇಯರ್ ಒಟ್ಟು ಮೂರು ಜನರನ್ನು ನೀಡಬಹುದಾಗಿದೆ.

7. **ದಕ್ಷಿಣ ವಲಯ :–** ಈ ವಲಯದಲ್ಲಿ 14 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 6 ರಸ್ತೆಗಳಲ್ಲಿ ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದ ಅಪರ ಆಯುಕ್ತರ ವರದಿಯ ಪ್ರಕಾರ ಹಾಲಿ ಇರುವ ಹುದ್ದೆ ಕಂದಾಯ ನಿರೀಕ್ಷಕರು ಮತ್ತು ಸರ್ವೆಯರ್ ಹುದ್ದೆಗಳನ್ನು ಹಾಲಿ ಇರುವ ಹುದ್ದೆ ಕಂದಾಯ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ನಿರೀಕ್ಷಕರು ಮತ್ತು ಸರ್ವೆಯರ್ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಎರಡು ಹುದ್ದೆಗಳನ್ನು ಈ ವಲಯಕ್ಕೆ ನೀಡಬಹುದಾಗಿದೆ.

8. **ಪಶ್ಚಿಮ ವಲಯ :–** ಈ ವಲಯದಲ್ಲಿ ಹಲವು ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಲಾಗಿರುವುದಿಲ್ಲ. ಈ ವಲಯದಲ್ಲಿ ಯಾವುದೇ ಪ್ರಗತಿ ಆಗಿರುವುದಿಲ್ಲ ಹಾಗೂ ವರದಿ ಸಹ ಬಂದಿರುವುದಿಲ್ಲ, ಈಗ ಉಳಿದ ಯಾವುದೇ ನೌಕರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಅವಶ್ಯಕತೆ ಉಂಟಾದಲ್ಲಿ ಬೇರೆ ವಲಯಗಳಿಂದ ನಿಯೋಜಿಸಬಹುದಾಗಿದೆ.

9. **ಕೇಂದ್ರ ಕಛೇರಿ :–** ಕೇಂದ್ರ ಕಛೇರಿಯ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಶಾಖೆಯಲ್ಲಿ ಒಬ್ಬ ಪ್ರ.ದ.ಸ ಹಾಗೂ ಒಬ್ಬ ದ್ವಿ.ದ.ಸ/ಗ್ರಾ.ಲೆ. ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಕರ್ತವ್ಯ ನಿರತ ಹುದ್ದೆಗಳನ್ನು ಮುಂದುವರೆಸಬಹುದಾಗಿರುತ್ತದೆ.

| ಕ್ರ ಸಂ | ವಲಯ | ಅಗತ್ಯತೆಯ ಅನುಸಾರ ವಲಯದ ಅಪರ/ಜಂಟಿ ಆಯುಕ್ತರು ಕೋರಿರುವ ಹುದ್ದೆಗಳು | | | | | ಒಟ್ಟು ಹುದ್ದೆ ಸಂಖ್ಯೆ |
|---|---|---|---|---|---|---|---|
| | | ತಹಶೀಲ್ದಾರ್ | ಶಿರಸ್ತೇದಾರ್ | ರಾನಿ/ಪ್ರ.ದ.ಸ | ಗ್ರಾಮ ಲೆಕ್ಕಿಗರು/ ದಿ.ದ.ಸ. | ಸರ್ವೆಯರ್ | |
| 1 | ಯಲಹಂಕ | 1 | – | 1 | – | 2 | 4 |
| 2 | ದಾಸರಹಳ್ಳಿ | – | – | 1 | – | 1 | 2 |
| 3 | ಮಹದೇವಪುರ | 1 | – | – | 1 | 1 | 3 |
| 4 | ಪೂರ್ವ | – | 1 | – | 1 | 1 | 3 |
| 5 | ಬೊಮ್ಮನಹಳ್ಳಿ | – | 1 | 1 | 1 | 1 | 4 |
| 6 | ದಕ್ಷಿಣ | – | – | 1 | – | 1 | 2 |
| 7 | ರಾ.ರಾ.ನಗರ | – | – | 1 | – | 1 | 2 |
| 8 | ಪಶ್ಚಿಮ | – | – | – | – | – | – |
| 9 | ಕೇಂದ್ರ ಕಛೇರಿ | – | – | 1 | 1 | – | 2 |
| | ಒಟ್ಟು | 2 | 2 | 6 | 4 | 8 | 22 |



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಹಾಗೂ ಟಿ.ಡಿ.ಆರ್. ಕಾರ್ಯನಿರ್ವಹಣೆಗಾಗಿ ಕಂದಾಯ ಇಲಾಕೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯ ಪಾಲಿಕೆಗೆ ಅತ್ಯಗತ್ಯವಾಗಿಬೇಕಾಗಿದ್ದು ಪ್ರಸ್ತುತ ಇತರೆ ಸರ್ಕಾರಿ ನೌಕರರ ವೇತನವನ್ನು ಸರ್ಕಾರವು ಹೆಚ್ಚಿಸಿರುವುದರಿಂದ ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡಂತೆ ಮಾಹೆಯಾನ ಪರಿಷ್ಕೃತ ಸಂಚಿತ ವೇತನವನ್ನು ನಿಗಧಿಪಡಿಸಿ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ಅವಶ್ಯಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ತಹಶೀಲ್ದಾರ್‌ರು | 16,000 | 2 |
| 2 | ಶಿರಸ್ತೇದಾರ್‌ರು | 14,000 | 2 |
| 3 | ಕಂದಾಯ ನಿರೀಕ್ಷಕರು/ಪ್ರ.ದ.ಸ | 12,000 | 6 |
| 4 | ಮೋಜಣಿದಾರರು | 12,000 | 8 |
| 5 | ಗ್ರಾಮಲೆಕ್ಕಿಗರು/ದ್ವಿ.ದ.ಸ | 10,000 | 4 |
| | ಒಟ್ಟು | | 22 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲ ಪಾಲಿಕೆಯಲ್ಲಿ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಕಾರ್ಯಗಳನ್ನು ನಿರ್ವಹಿಸಲು ಕಂದಾಯ ಇಲಾಖೆಯು 22 ಮಂದಿ ನಿವೃತ್ತ ಅಧಿಕಾರಿ/ನೌಕರರುಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳ 1977 ರ ನಿಯಮ 20 (ಎ) ರನ್ವಯ ಹುದ್ದೆಯ ಕಾಣಿಸಿರುವ ಕ್ರೋಢಿಕೃತ ಸಂಚಿತ ವೇತನದ ಆಧಾರದ ಮೇಲೆ ದಿ: 01-06-2012 ರಿಂದ ಒಂದು ವರ್ಷದ ಅವಧಿಗೆ ಅಥವಾ ಅವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕಾತಿ ಮಾಡಿಕೊಂಡು ಅವರ ಸಂಚಿತ ವೇತನ ವೆಚ್ಚವನ್ನು ಪಾಲಿಕೆಯ 2012-13ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಸಲುವಾಗಿ ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿ: 16-04-2012ರ ಸಂಖ್ಯೆ: ಎಲ್‌ಎಕ್ಯೂ/ಪಿಆರ್/ಟಿ.ನಿ.ಸಿ/01/2012-13 ರ ಟಿಪ್ಪಣಿ.

## ನಿರ್ಣಯ:

ಈ ಕೆಳಕಂಡ ಅವಲೋಕನೆ ಕುರಿತಂತೆ ಸ್ಪಷ್ಟವಾದ ಮಾಹಿತಿಯೊಂದಿಗೆ ಮರುಮಂಡಿಸಲು ಹಿಂದಿರುಗಿಸಿದೆ.

"ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ ನೌಕರರುಗಳ ಕಾರ್ಯವೈಖರಿ ಕುರಿತಂತೆ ಸಾಕಷ್ಟು ದೂರುಗಳಿದ್ದು, ಈ ಒಂದು ಕಾರ್ಯವನ್ನು ಪಾಲಿಕೆಯ ಖಾಯಂ ನೌಕರರುಗಳ ವೃಂದ್ಧದಿಂದ ನಿರ್ವಹಿಸಲು ಸಾಧ್ಯವಿಲ್ಲವೇ ಎಂಬ ಬಗ್ಗೆ ಸ್ಪಷ್ಟೀಕರಣನೀಡತಕ್ಕದ್ದು".

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/03/2012-13**

ಟಿಪ್ಪಣಿಯಲ್ಲಿ ತಿಳಿಸಿರುವ ಕಾರಣಗಳಿಗಾಗಿ ಶ್ರೀ ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಪರಿಶೀಲಿಸಿ, ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಸರ್ಕಾರದ ಪತ್ರದಲ್ಲಿ ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 35 ಲೆಕ್ಕಾಧೀಕ್ಷಕರುಗಳ ಹುದ್ದೆಯು ಮಂಜೂರು ಆಗಿರುತ್ತದೆ.

ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ದಿನಾಂಕ: 19-05-2005 ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತದೆ. ಆದ್ದರಿಂದ ಲೆಕ್ಕಾಧೀಕ್ಷಕರ ಹುದ್ದೆಯು ಮಂಜೂರು ಆಗಿರುತ್ತದೆ.

ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ಸರ್ಕಾರವು ದಿನಾಂಕ: 19-05-2005 ರ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುತ್ತದೆ. ಆದ್ದರಿಂದ ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಕೆಳಕಂಡ ರೀತಿ ಭರ್ತಿ ಮಾಡಬೇಕಾಗಿರುತ್ತದೆ.

| ಹುದ್ದೆಯ ಪದನಾಮ | ತುಂಬುವ ವಿಧಾನ | ವಿದ್ಯಾರ್ಹತೆ |
|---|---|---|
| ಲೆಕ್ಕ ಆಧೀಕ್ಷಕರು ವೇತನ ಶ್ರೇಣಿ ರೂ. 10800-20025 | ಶೇ.50 ರಷ್ಟು ಹುದ್ದೆಯನ್ನು ರಾಜ್ಯ ಲೆಕ್ಕ ಪತ್ರ ಇಲಾಖೆ, ಕರ್ನಾಟಕ ಸರ್ಕಾರದಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳವುದು.<br>ಶೇ. 50 ರಷ್ಟು ಹುದ್ದೆಯನ್ನು ಪಾಲಿಕೆಯ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಹುದ್ದೆಯ ಅನುಪಾತ 4:1 ರ ಅಡಿಯಲ್ಲಿ ಮುಂಬಡ್ತಿ ನೀಡಬೇಕಾಗಿದ್ದು, 5ನೇ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿಗೆ ಪರಿಗಣಿಸಬೇಕಾಗಿರುತ್ತದೆ. | ಕನಿಷ್ಠ 5-ವರ್ಷ ಸೇವೆಯನ್ನು ಅರ್ಹತೆ ಹೊಂದಿರುವ ಹುದ್ದೆಯಲ್ಲಿ ಸಲ್ಲಿಸತಕ್ಕದ್ದು, ಈ ಅರ್ಹತೆ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಕನಿಷ್ಠ 3-ವರ್ಷಗಳ ಸೇವೆ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳನ್ನು ಪರಿಗಣಿಸಬಹುದಾಗಿರುತ್ತದೆ.<br>ಇಲಾಖಾ ಪರೀಕ್ಷೆಗಳು:<br>1. ಎಸ್.ಎ.ಎಸ್ ಪರೀಕ್ಷೆ<br>2. ಕನ್ನಡ ಭಾಷಾ ಪರೀಕ್ಷೆ<br>3. ಅಕೌಂಟ್ಸ್ ಹೈಯರ್<br>4. ರೆವಿನ್ಯೂ ಹೈಯರ್<br>5. ಮುನಿಸಿಪಲ್ & ಲೋಕಲ್ ಬೋರ್ಡ್<br>6. ಜನರಲ್-ಲಾ |

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಲಿ ಇರುವ ಹುದ್ದೆಗಳು ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ವಿವರಗಳು | ಮಂಜೂರಾಗಿರುವ ಹುದ್ದೆಗಳು | ಕಾರ್ಯನಿರ್ವಹಿಸುತ್ತಿರುವ ಹುದ್ದೆ | ಖಾಲಿ ಹುದ್ದೆ | ಷರಾ |
|---|---|---|---|---|---|
| 1 | ಬಿ.ಬಿ.ಎಂ.ಪಿ | 18 | 8 | 10 | – |
| 2 | ರಾಜ್ಯ ಲೆಕ್ಕಪತ್ರ ಇಲಾಖೆ | 17 | 40 | –23 | ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |

ನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಪೌರಾಡಳಿತ ನಿರ್ದೇಶನಾಲಯದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರು, ಇವರನ್ನು ಪಾಲಿಕೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲ.

ಸರ್ಕಾರವು ದಿನಾಂಕ: 18–02–2012 ರ ಪತ್ರದಲ್ಲಿ ಶ್ರೀ.ಸಿ.ಬ್ರಿಜೇಶ್, ಲೆಕ್ಕಾಧೀಕ್ಷಕರ ಇವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವುದಕ್ಕೆ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 31–05–2012 ರ ಸಂಖ್ಯೆ: ಬಿ12 (ಸಿ1) ಪಿಆರ್/47/2011–12 ರ ಟಿಪ್ಪಣಿ.

**ನಿರ್ಣಯ:**

ವಿಷಯದ ಬಗ್ಗೆ ದೀರ್ಘವಾದ ಚರ್ಚೆ ನಂತರ ಆಯುಕ್ತರ ದಿನಾಂಕ:31.05.2012ರ ಟಿಪ್ಪಣಿಯಲ್ಲಿ ವಿವರಿಸಿರುವ ರೀತ್ಯಾ ಈ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಅಂತಿಮ ತೀರ್ಮಾನಕ್ಕೆ ಮಂಡಿಸಲು ನಿರ್ಣಯಿಸಿದೆ.

**ವಿಷಯ ಸಂಖ್ಯೆ: ಸಿಆಸುಸ್ಥಾಸ/ 04 /2012–13**

**ನಿರ್ಣಯ:**

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ತಿದ್ದುಪಡಿ) ಬಿಲ್ 2010ಕ್ಕೆ 27.07.2010ರಂದು ಮಾನ್ಯ ರಾಜ್ಯಪಾಲರು ಒಪ್ಪಿಗೆ ನೀಡಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಕಾರ್ಯವೈಖರಿ ಕುರಿತಂತೆ ಸೇವಾ ನಿಯಮಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ನಿರ್ವಹಿಸತಕ್ಕದ್ದೆಂದು ಅಧಿಕೃತವಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 26 ಶಾಸನ2010,

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಬೆಂಗಳೂರು ದಿನಾಂಕ:30.07.2010 ರ ರೀತ್ಯಾ ಪ್ರಕಟಣೆಗೊಂಡಿದ್ದು ಈ ಮೇರೆಗೆ ಆಯುಕ್ತರು ಸೇವಾ ವಿಷಯಗಳಿಗೆ ಸಂಬಂಧ ಪಟ್ಟಂತಹ ಎಲ್ಲಾ ಕಡತಗಳ ವ್ಯವಹರಣೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕಾರ್ಯನಿರ್ವಹಿಸಬೇಕಾಗಿದ್ದು, ಆದರೆ ಮೇಲ್ಕಂಡ ಸರ್ಕಾರದ ಅಧಿಸೂಚನೆಯ ಬಗ್ಗೆ ಗಮನ ಹರಿಸದೆ ಕಡತಗಳ ವ್ಯವಹರಣೆಯನ್ನು ಸಮಿತಿಯ ಅನುಮೋದನೆ ಪಡೆಯದೆ ಕ್ರಮಕೈಗೊಳ್ಳಲಾಗುತ್ತಿದ್ದು, ಅತಿ ಮುಖ್ಯವಾಗಿ ನಿಯೋಜನೆಯ ಮೇಲಿನ ಅಧಿಕಾರಿಗಳ ನಿಯಂತ್ರಣಕ್ಕೆ ಸಂಬಂಧಪಟ್ಟ ಕಡತಗಳನ್ನು ಸಮಿತಿಯ ಅನುಮೋದನೆ ಪಡೆಯದೆ ಅಧಿಕಾರಿಗಳ ಹಾಜರಾತಿಯನ್ನು ಪಡೆದು ಆನಂತರ ಸಮಿತಿಯ ಗಮನಕ್ಕೆ ಕೆಲವು ಕಡತಗಳನ್ನು ಮಾತ್ರ ತರುತ್ತಿರುವುದು ಖಂಡನೀಯ ಅಂಶವಾಗಿರುತ್ತದೆ. ಉದಾಹರಣೆಗೆ ಶ್ರೀ. ಬಿ.ಎಂ.ಪರಮೇಶ್ವರ, ಭಾ.ಅ.ಸೇ, ಅರಣ್ಯ ಸಂರಕ್ಷಣಾಧಿಕಾರಿ ರವರನ್ನು ಪಾಲಿಕೆಯಲ್ಲಿ ಹಾಜರಾತಿ ಪಡೆಯುವ ಸಂಬಂಧ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಲು ಜಂಟಿ ಆಯುಕ್ತರು (ಆಡಳಿತ ಮಾನವ ಸಂಪನ್ಮೂಲ) ರವರು ಶಿಫಾರಸ್ಸು ಮಾಡಿದ್ದರು ಸಹ ಆಯುಕ್ತರು ದಿನಾಂಕ:06.03.2012ರ ತಮ್ಮ ಆದೇಶದಲ್ಲಿ "ಅಗತ್ಯವಿಲ್ಲ"ವೆಂದು ತಿಳಿಸಿರುವುದು ವಿಷಾದನೀಯ ಅಂಶವಾಗಿರುತ್ತದೆ.

ಆದಕಾರಣ ಸರ್ಕಾರದ ಆದೇಶದನುಸಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಒಳಪಡತಕ್ಕತಂಹ ಎಲ್ಲಾ ಕಡತಗಳನ್ನು ಸಮತಿಯ ಅನುಮೋದನೆ ಪಡೆಯದೆ ಯಾವುದೇ ವಿಧವಾದ ಕ್ರಮ ಕೈಗೊಳ್ಳತಕ್ಕದ್ದಲ್ಲವೆಂದು ಆಯುಕ್ತರಿಗೆ ಸೂಚಿಸಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 16-06-2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಆಯುಕ್ತರ ಕಛೇರಿಯ ಅನಿರೀಕ್ಷಿತ ತಪಾಸಣಾ ವರದಿ

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಅಪರ ಆಯುಕ್ತರು (ಆಡಳಿತ) |
| 2 | ಎನ್. ಶಾಂತಕುಮಾರಿ | ಸದಸ್ಯರು | ಉಪ ಆಯುಕ್ತರು (ಆಡಳಿತ) |
| 3 | ಮೋಹನ್ ಕುಮಾರ್ | ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ) |
| 4 | ಎಸ್.ಎಂ. ಮುರುಗೇಶ್ ಮೊದಲಿಯರ್ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 5 | ಅಬ್ದುಲ್ ರಖೀಬ್ ಝಕೀರ್ | ಸದಸ್ಯರು | ವಿಶೇಷ ಅಧಿಕಾರಿ |
| 6 | ನಾಜಿನಿ ಬೇಗಂ | ಸದಸ್ಯರು | ಆಯುಕ್ತರ ಕಛೇರಿ ನೋಡಲ್ ಅಧಿಕಾರಿಗಳು |
| 7 | ಭುವನೇಶ್ವರಿ | ಸದಸ್ಯರು | |
| 8 | ಎಲ್.ನಾಗರತ್ನ | ಸದಸ್ಯರು | |
| 9. | ರಾಜಣ್ಣ | ಸದಸ್ಯರು | |

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯು ಈ ದಿವಸ ಬೆಳಿಗ್ಗೆ 10.30 ರ ಸಮಯಕ್ಕೆ ಕೇಂದ್ರ ಕಛೇರಿಯ ಹಿಂಭಾಗದ ಕಟ್ಟಡದಲ್ಲಿನ ಪ್ರಧಾನ ಅಭಿಯಂತರರ ಕಛೇರಿಯ ತಪಾಸಣೆ ಕೈಗೊಂಡಿದ್ದು, ಆ ಸಂದರ್ಭದಲ್ಲಿ ಕಛೇರಿಯಲ್ಲಿ ದ್ವಿತೀಯ ದರ್ಜೆ ಗುಮಾಸ್ತರೊಬ್ಬರು ಹಾಗೂ 4ನೇ ದರ್ಜೆಯ ನೌಕರರು ಮಾತ್ರ ಹಾಜರಿದ್ದು, ಉಳಿದತಂಹ ಸಿಬ್ಬಂದಿ ವರ್ಗದವರು ಯಾವುದೇ ವಿಧವಾದ ಸೂಚನೆ ನೀಡದೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಕಛೇರಿಯ ಪರಿಸರವು ಸುಚಿತ್ವವಿಲ್ಲದೆ ಅನುಪಯುಕ್ತ ಯಂತ್ರೋಪಕರಣಗಳು ಹಾಗೂ ಸಾಮಗ್ರಿಗಳು ಎಲ್ಲೆಂದರಲ್ಲಿ ಇದ್ದು, ಕಛೇರಿಯ ದುಸ್ಥಿತಿ ಬಗ್ಗೆ ಸಾರಿ ಹೇಳುತ್ತದೆ. ಈ ಕಛೇರಿಯಲ್ಲಿ ಸಿಬ್ಬಂದಿ ವರ್ಗದವರಿಗಿಂತ ಹೆಚ್ಚಿನ ರೀತಿಯಲ್ಲಿ ಪೀಠೋಪಕರಣಗಳು ಕಂಪ್ಯೂಟರ್ ಯಂತ್ರಗಳಿದ್ದು ಇವುಗಳು ಅನುಪಯುಕ್ತವಾಗಿರುವುದರಿಂದ ಕೂಡಲೇ ಅವಶ್ಯವಿರುವ ಕಛೇರಿಗಳಿಗೆ ನೀಡಲು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

ಕಛೇರಿಯ ಕೆಲವು ದಾಖಲೆ ಪುಸ್ತಕಗಳನ್ನು ಪರಿಶೀಲಿಸಲಾಗಿ, ಯಾವುದೇ ದಾಖಲೆಗಳು ಸಹ ಬಟವಾಡೆ ಅಧಿಕಾರಿಗಳ ದೃಢೀಕರಣವಿಲ್ಲದಿರುವುದು ಕಂಡು ಬಂದಿರುತ್ತದೆ. ಕೂಡಲೇ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡತಕ್ಕದ್ದು. ಹಾಗೂ ಈ ಕಛೇರಿಯಲ್ಲಿ ಹೆಚ್ಚುವರಿಯಾಗಿ ಅನುಪಯುಕ್ತವಾಗಿರುವ ಸ್ಥಳವನ್ನು ಬೇರೆ ಕಛೇರಿಗಳಿಗೆ ಮಂಜೂರು ಮಾಡಬಹುದಾಗಿರುತ್ತದೆ.

ಸಮಿತಿಯು ನಂತರ ಆಯುಕ್ತರ ಆಡಳಿತ ಶಾಖೆಗೆ ಭೇಟಿನೀಡಿದ್ದು, ಕಛೇರಿಯ ಎಲ್ಲಾ ವಿಷಯ ನಿರ್ವಾಹಕರು ಹಾಜರಿರುತ್ತಾರೆ. ಅವರುಗಳ ವ್ಯಾಪ್ತಿಗೆ ಬರತಕ್ಕತಂಹ ವಿಷಯ ನಿರ್ವಹಣೆ ಕುರಿತಂತೆ ಸಂಕ್ಷಿಪ್ತ ಟಿಪ್ಪಣಿಯೊಂದನ್ನು ತಯಾರಿಸಿ ಉಪ ಆಯುಕ್ತರು(ಆಡಳಿತ)ರವರು ಸಮಿತಿಗೆ ಸಲ್ಲಿಸಿರುತ್ತಾರೆ.

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಈ ಟಿಪ್ಪಣಿಯನ್ನು ಕೂಲಂಕುಷವಾಗಿ ಪರಿಶೀಲಿಸಿಲಾದ ಸಂದರ್ಭದಲ್ಲಿ ಪಾಲಿಕೆಯಲ್ಲಿ ಮಂಜೂರಾತಿಯಾಗಿರುವ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಎರವಲು ಸೇವೆಯ ಅಧಿಕಾರಿ/ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಹಾಗೂ ಕೆಲವು ಕಛೇರಿಗಳು ಮಂಜೂರಾತಿ ಇಲ್ಲದಿದ್ದಾಗ್ಯೂ ಸಹ ಸರ್ಕಾರದಿಂದ ಎರವಲು ಸೇವೆಯ ಮೇಲೆ ಅಧಿಕಾರಿಗಳನ್ನು ನಿಯೋಜಿಸಲಾಗಿರುತ್ತದೆ. ಇವರುಗಳ ವೇತನ ಬಟವಾಡೆ ಕುರಿತಂತೆ ಯಾವ ಶೀರ್ಷಿಕೆಯಡಿ ವೇತನವನ್ನು ಪಾವತಿಸಲಾಗುತ್ತಿದೆ ಎಂಬ ಬಗ್ಗೆ ಹಾಜರಿದ್ದಂತಹ ಹಿರಿಯ ಅಧಿಕಾರಿಗಳು ವಿವರಣೆ ನೀಡಲು ವಿಫಲರಾಗಿರುತ್ತಾರೆ. ಈ ಸಂದರ್ಭದಲ್ಲಿ ಮುಖ್ಯ ಲೆಕ್ಕಾಧಿಕಾರಿಗಳನ್ನು ಸಭೆಗೆ ವಿವರಣೆ ನೀಡಲು ಕೋರಲಾಗಿ ಸದರಿ ರವರು ತಾವು ಪಾಲಿಕೆಯ ಸೇವೆಗೆ ಹೊಸದಾಗಿ ಬಂದಿರುವುದಾಗಿಯು ಸ್ವಲ್ಪ ಸಮಯ ಅವಕಾಶ ನೀಡಿದ ಪಕ್ಷದಲ್ಲಿ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಈ ಬಗ್ಗೆ ವಿವರಣೆ ನೀಡುವುದಾಗಿ ವಿವರಿಸಿರುತ್ತಾರೆ ಹಾಗೂ ಮಂಜೂರಾತಿ ಹುದ್ದೆ ಇಲ್ಲದಿದ್ದ ಪಕ್ಷದಲ್ಲಿ ಹೆಚ್ಚುವರಿಯಾಗಿ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳ ವೇತನ ಬಟವಾಡೆ ವಿತರಣೆ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಹ ತಿಳಿಸಿರುತ್ತಾರೆ.

ಶ್ರೀ.ಮೋಹನ್ ಕುಮಾರ್, ಸದಸ್ಯರು ಮಾತನಾಡುತ್ತಾ ಮುಖ್ಯ ಲೆಕ್ಕಾಧಿಕಾರಿಯಾಗಿ ತಾವು ಪಾಲಿಕೆಯ ಸೇವೆಗೆ ಹಾಜರಾತಿ ನೀಡಿರುವ ಕುರಿತಂತೆ ಕಛೇರಿ ಆದೇಶವೇನಾದರು ಜಾರಿಯಾಗಿದೆಯೇ ಎಂಬ ಬಗ್ಗೆ ವರದಿ ನೀಡಲು ಕೋರಿದ್ದು, ಶ್ರೀ. ಮುರುಗೇಶ್ ಮೊದಲಿಯಾರ್, ಸದಸ್ಯರು ಸಹ ಈ ಸಂಬಂಧ ಸಮಿತಿಯ ಅವಗಾಹನೆಗೆ ಕಡತವು ಬಂದಿರುವುದೆ ಎಂಬ ಬಗ್ಗೆ ಪ್ರಸ್ತಾಪಿಸಿದ್ದು, ಸಭೆಯಲ್ಲಿ ಇದ್ದಂತಹ ವಿಷಯ ನಿರ್ವಾಹಕರು ಮುಖ್ಯ ಲೆಕ್ಕಾಧಿಕಾರಿಗಳ ನಿಯೋಜನೆ ಕುರಿತಂತಹ ಯಾವುದೇ ಕಡತವು ತಹಲ್ ವರೆವಿಗೂ ಬಂದಿರುವುದಿಲ್ಲವೆಂದು ತಿಳಿಸಿದ್ದು, ಸಭೆಯಲ್ಲಿದ್ದಂತಹ ಅಪರ ಆಯುಕ್ತರು (ಆಡಳಿತ)ರವರು ಈ ಕಡತವು ವ್ಯವಹರಣೆ ಹಂತದಲ್ಲಿರುವುದಾಗಿ ತಿಳಿಸಿ, ಕಡತವು ಕಣ್ತಪ್ಪಿನಿಂದ ಕಛೇರಿಯಲ್ಲಿರುವುದಾಗಿ ತಿಳಿಸಿರುತ್ತಾರೆ. ಅಪರ ಆಯುಕ್ತರು(ಆಡಳಿತ)ರವರ ವಿವರಣೆಯಿಂದಾಗಿ ಸಮಿತಿಯು ತೀವ್ರತರನಾದ ಅಸಮಾಧಾನವನ್ನು ವ್ಯಕ್ತಪಡಿಸಿದ ಸಂದರ್ಭದಲ್ಲಿ ಅಪರ ಆಯುಕ್ತರು(ಆಡಳಿತ)ರವರು ಸಮಿತಿಯ ಸದಸ್ಯರೊಬ್ಬರ ಬಗ್ಗೆ ಅನುಚಿತವಾದ ಭಾಷೆಯಲ್ಲಿ ಸಂಭೋದಿಸಿದ್ದು ಈ ಬಗ್ಗೆ ಎಲ್ಲಾ ಸದಸ್ಯರುಗಳು ಒಟ್ಟಾರೆಯಾಗಿ ತಮ್ಮ ತೀವ್ರವಾದ ಅಸಮಾಧಾನವನ್ನು ವ್ಯಕ್ತಪಡಿಸುತ್ತ, ಅಪರ ಆಯುಕ್ತರು(ಆಡಳಿತ)ರವರು ಸಭೆಯಲ್ಲಿ ಘನತೆ ಹಾಗೂ ಗಾಂಭೀರ್ಯವನ್ನು ಕಾಪಾಡಿಕೊಳ್ಳಲು ತಿಳಿಸಿ ಗೌರವಾನ್ವಿತ ಸದಸ್ಯರೊಬ್ಬರ ಬಳಿ ಈ ರೀತಿ ಅನುಚಿತವಾಗಿ ವರ್ತಿಸುವುದು ತರವಲ್ಲವೆಂದು ತೀವ್ರವಾಗಿ ಆಕ್ಷೇಪಿಸಲಾಗಿರುತ್ತದೆ. ಆ ಸಂದರ್ಭದಲ್ಲಿ ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ218 ಎಂಎನ್‌ಜಿ 2012, ದಿನಾಂಕ:31.05.2012 ರ ಪತ್ರವನ್ನು ಆ ಸಂದರ್ಭದಲ್ಲಿ ಸಭೆಯ ಅವಗಾಹನೆಗೆ ತರಲಾಗಿರುತ್ತದೆ. ಮುಖ್ಯ ಲೆಕ್ಕಾಧಿಕಾರಿಗಳ ಹುದ್ದೆಗೆ ನಿಯೋಜಿಸಲ್ಪಟ್ಟಿರುವ ಅಧಿಕಾರಿಗಳ ನಿಯೋಜನೆ ಕುರಿತಂತೆ ಅಧಿಕೃತವಾಗಿ ಕಛೇರಿ ಆದೇಶ ಜಾರಿಯಾಗದಿದ್ದರು ಸಹ ದಿನಾಂಕ:31.05.2012ರಿಂದ ಸದರಿ ರವರು ಅನಧಿಕೃತವಾಗಿ ಮುಖ್ಯ ಲೆಕ್ಕಾಧಿಕಾರಿಗಳ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸೋಜಿಗದ ಅಂಶವಾಗಿರುತ್ತದೆ. ಸದರಿ ಅಧಿಕಾರಿಗಳು ಅಧಿಕೃತ ಕಛೇರಿ ಆದೇಶವಿಲ್ಲದೆ ಚೆಕ್‌ಗಳನ್ನು ಸಹಿ ಮಾಡುವುದು, ಆದೇಶಗಳನ್ನು ಹೊರಡಿಸುವುದು ಸಮಂಜಸವೇ ಎಂದು ಶ್ರೀ. ಮುರುಗೇಶ್ ಮೊದಲಿಯಾರ್, ಶ್ರೀ.ಮೋಹನ್ ಕುಮಾರ್ ಹಾಗೂ ಶ್ರೀ. ರಾಜಣ್ಣ ರವರು ಕೇಳಲಾಗಿ ಅಪರ ಆಯುಕ್ತರು (ಆಡಳಿತ)ರವರು ಈ ಬಗ್ಗೆ ವಿವರಣೆ ನೀಡಲು ವಿಫಲರಾಗಿರುತ್ತಾರೆ. ಈ ಒಂದು ಕರ್ತವ್ಯ ಲೋಪವು ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರು, ವ್ಯವಸ್ಥಾಪಕರು, ಸಹಾಯಕ ಆಯುಕ್ತರು (ಆಡಳಿತ) ರವರ ವೈಫಲ್ಯವನ್ನು ಎತ್ತಿ ತೋರಿದ್ದು ಕೂಡಲೇ ಇವರುಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮುಂದುವರೆದಂತೆ, ಇದೇ ಸಂದರ್ಭದಲ್ಲಿ ಅಪರ ಆಯುಕ್ತರು (ಆಡಳಿತ)ರವರು ಕೆಳಕಂಡ ಕಡತಗಳನ್ನುಚರ್ಚಿಸಲು ಕೋರಿ ಸಹಾಯಕ ಆಯುಕ್ತರು (ಆಡಳಿತ–1)ರವರಿಗೆ ಕಳುಹಿಸಿಕೊಟ್ಟಿದ್ದು ಸದರಿಯವರು ಕಡತಗಳ ಕುರಿತಂತೆ ಯಾವುದೇ ವಿಧವಾದ ಕ್ರಮ ಜರುಗಿಸದೆ ದುರುದ್ದೇಶ ಪೂರಕವಾಗಿ ವಿಲೇ ಇಟ್ಟಿರುವುದು ಕಂಡುಬಂದಿದ್ದು, ಈ ಸಂದರ್ಭದಲ್ಲಿ ಸದರಿಯವರು ಸಮರ್ಪಕವಾದ ರೀತಿಯಲ್ಲಿ ವಿವರಣೆ ನೀಡಲು ವಿಫಲರಾಗಿದ್ದು ಇದು ಇವರ ಕರ್ತವ್ಯ ಲೋಪವನ್ನು ಎತ್ತಿತೋರಿದ್ದು, ಈ ಬಗ್ಗೆ ತಾವು ವಿಲೆಗೆ ಕಾರಣರಾದಂತಹ ಎಲ್ಲಾ ಸಿಬ್ಬಂದಿ ವರ್ಗದವರ ಮೇಲು ಶಿಸ್ತಿನ ಕ್ರಮ ಕೈಗೊಂಡು ಈ ಬಗೆಗಿನ ವರದಿಯನ್ನು ಸಮಿತಿಗೆ ಮಂಡಿಸುವುದು.

**ವಿಲೇವಾರಿಯಾಗದೆ ಬಾಕಿ ಉಳಿದಿರುವ ಕಡತಗಳ ವಿವರಗಳು**

| ಕ್ರ.ಸಂ | ಕಡತದ ಸಂಖ್ಯೆ | ವಿಷಯ | ಕಛೇರಿ ಸ್ವೀಕೃತಿ ದಿನಾಂಕ | ವಿಷಯ ನಿರ್ವಾಹಕರ ದಿನಾಂಕ | ಸಹಾಯಕ ಆಯುಕ್ತರು (ಆಡಳಿತ)ರವರ ಬಳಿ ಚರ್ಚೆಗಾಗಿ ಸ್ವೀಕೃತಿಯಾದ ದಿನಾಂಕ |
|---|---|---|---|---|---|
| 1 | ಬಿ12(54)ಪಿಆರ್/50/12–13 | ಎಂ.ಕೃಷ್ಣಮೂರ್ತಿ, 4ನೇ ದರ್ಜೆ ನೌಕರವರ ಮುಂಬಡ್ತಿ ಬಗ್ಗೆ. | 24.08.11 | 14.02.12 | 28.04.12 |
| 2 | ಬಿ12(6)ಪಿಆರ್/96/12–13 | ಬಿ.ವೆಂಕಟಸ್ವಾಮಿ, ಸ.ಕಾ.ನಿ.ಅರವರು ಮುಂದುವರೆಸುವ ಬಗ್ಗೆ. | 25.04.12 | 03.05.12 | 14.05.12 |
| 3 | ಬಿ12(6)ಪಿಆರ್/535/11–12 | ವಾರ್ಡ್ ಸಂ 110ರ ಅನಧಿಕೃತ ಕಟ್ಟಡದ ಬಗ್ಗೆ ದೂರು. | 02.04.12 | – | 21.05.12 |
| 4 | ಬಿ12(5ಹೆಚ್)ಪಿಆರ್/02/12 | ಅರಣ್ಯಾಧಿಕಾರಿಗಳ ನಿಯೋಜನೆ ಬಗ್ಗೆ. | 14.03.12 | – | 30.03.12 |
| 5 | ಬಿ12(6)ಪಿಆರ್/564/12–13 | ವಾರ್ಡ್ ಸಂ:24ರಲ್ಲಿ ಅನಧೀಕೃತವಾಗಿ ವಾಣಿಜ್ಯ ಕಟ್ಟಡ ನಿರ್ಮಿಸಿರುವ ಬಗ್ಗೆ ದೂರು | 09.02.12 | 21.04.12 | 26.05.12 |
| 6 | ಬಿ12(1)ಪಿಆರ್/30/11–12 | ಶ್ರೀ.ಶಾಂತರಾಂ ವ್ಯವಸ್ಥಾಪಕರು ರವರ ವರ್ಗಾವಣೆ ಬಗ್ಗೆ | 19.03.12 | 27.03.12 | 05.04.12 |

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | | | | | |
|---|---|---|---|---|---|
| **7** | ಬಿ12(5ಹೆಚ್)/ಪಿಆರ್/88/11–12 | ಬೃ.ಬೆಂ.ಮ.ಪಾಲಿಕೆಯ ಜಂಟಿ ನಿರ್ದೇಶಕರು(ತೋಟಗಾರಿಕೆ) ಹುದ್ದೆಯನ್ನು ರದ್ದುಪಡಿಸುವ ಬಗ್ಗೆ. | 14.03.12 | 17.04.12 | 28.04.12 |
| **8** | ಬಿ12(1)ಪಿಆರ್/54/11–12 | ಶ್ರೀಮತಿ ಜ್ಯೋತಿ ವಿನೋಧ್ ಜನನ ಮತ್ತು ಮರಣ ನೊಂದಣಾಧಿಕಾರಿಗಳನ್ನು ಪಾಲಿಕೆಯಲ್ಲಿ ವಿಲೀಗೊಳಿಸು ಬಗ್ಗೆ. | 08.06.11 | 09.11.12 | 17.04.12 |
| **9** | ಬಿ12(1)ಪಿಆರ್/251/95–96/12–13 | ಬಿ.ಎಂ.ಟಿ.ಎಫ್ ಸಿಬ್ಬಂದಿಗಳಿಗೆ ಸಮವಸ್ತ್ರ ಒದಗಿಸುವ ಬಗ್ಗೆ. | – | – | 17.04.12 |
| **10** | ಬಿ12(1)ಪಿಆರ್/527/11–12, | ತೋಬರಹಳ್ಳಿ ಗ್ರಾಮದ ನಂ647/438/37/2ರಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯಕ್ಕೆ ಉಪ ಸಂಖ್ಯೆ ನೀಡಿರುವ ಬಗ್ಗೆ. | 12.03.12 | 31.03.12 | 17.04.12 |
| **11** | ಬಿ12(1)ಪಿಆರ್/564/11–12 | ಅಧ್ಯಕ್ಷರು, ನಗರ ಯೋಜನೆ ಸ್ಥಾಯಿ ಸಮಿತಿರವರ ಪತ್ರ. | 31.01.12 | 04.02.12 | 26.04.12 |
| **12** | ಬಿ12(6)ಪಿಆರ್/351/10.11 | ಶ್ರೀ.ರಾಮೇಗೌಡ, ಕಿರಿಯ ಅಭಿಯಂತರರು (ನಿವೃತ್ತ)ರವರ ಮನವಿ ಬಗ್ಗೆ | – | – | 30.04.12 |
| **13** | ಬಿ12(6ಎ)/ಪಿಆರ್/132/11–12 | ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತಿದ ಅಭಿಯಂತರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ | 26.11.11 | 29.06.12 | 14.05.12 |
| **14** | ಬಿ12(6)ಪಿಆರ್/159/11–12 | ಶ್ರೀ.ಬಿ.ವಿ.ರಮೇಶ್, ಸ.ಕಾ.ನಿ.ಅರವರನ್ನು ಪಾಲಿಕೆಗೆ ನಿಯೋಜಿಸುವ ಬಗ್ಗೆ | 13.02.12 | 27.02.12 | 17.4.12 |
| **15** | ಬಿ12(ಸಿ1)ಪಿಆರ್/02/12–13 | ಶ್ರೀ.ಪ್ರಸನ್ನ ಪ್ರವೀಣ್ ಕುಮರ್ ಲೆಕ್ಕಪರಿಶೋಧಕರು ರವರ ಮುಂಬಡ್ತಿ ಬಗ್ಗೆ | 29.03.12 | 13.04.12 | 14.05.12 |
| **16** | ಬಿ12(1)32/11–12 | ಶ್ರೀಮತಿ.ಹಸೀನಾ ಭಾನು. ಕಂದಾಯ ವಸೂಲಿಗಾರರ ವರ್ಗಾವಣೆ ಬಗ್ಗೆ | 22.03.12 | 26.03.12 | 29.03.12 |

(signature)

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ವರ್ಗದವರ ವೇತನ ಬಟವಾಡೆ ಕುರಿತಂತೆ ವಿವರವಾದ ವರದಿಯನ್ನು ಸಮಿತಿಗೆ ಅವಗಾಹನೆಗೆ ಮಂಡಿಸುವಂತೆ ಮುಖ್ಯ ಲೆಕ್ಕಾಧಿಕಾರಿರವರಿಗೆ ಸೂಚಿಸಲಾಗಿದ್ದು, ಸದರಿ ರವರು ಎಲ್ಲಾ ಬಟವಾಡೆ ಅಧಿಕಾರಿಗಳಿಂದ ಕ್ರೂಢಿಕೃತವಾದ ವರದಿಯನ್ನು ಮಂಡಿಸುವುದಾಗಿ ತಿಳಿಸಿರುತ್ತಾರೆ.

ಶ್ರೀ. ಮೋಹನ್ ಕುಮಾರ್, ಸದಸ್ಯರು ರವರು ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ವಿರುದ್ದವಾಗಿ ಮಂಜೂರಾತಿಯಲ್ಲದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ವೇತನ ವಿತರಣೆ ಕುರಿತಂತೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳುವ ಕುರಿತಂತೆ ನೀತಿಯೊಂದನ್ನು ರೂಪಿಸಿಕೊಳ್ಳಲು ಸಹ ಮುಖ್ಯ ಲೆಕ್ಕಾಧಿಕಾರಿರವರಿಗೆ ಸೂಚಿಸಿರುತ್ತಾರೆ.

ಅಧ್ಯಕ್ಷರು ಈ ಸಂದರ್ಭದಲ್ಲಿ ಮಾತನಾಡುತ್ತಾ ಸರ್ಕಾರದ ಆದೇಶದ ರೀತ್ಯಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಗೆ ಹಂಚಿಕೆ ಮಾಡಿರುವ ಕಾರ್ಯ ವೈಖರಿ ರೀತ್ಯಾ ಯಾವ ಯಾವ ವಿಷಯಗಳಿಗೆ ಸಂಬಂಧಪಟ್ಟ ಕಡತಗಳು ಅನುಮೋದನೆಗೆ ಅವಶ್ಯಕವಿದಯೋ ಅಂತಹ ಕಡತಗಳನ್ನು ಯಾವುದೇ ವಿಧವಾದ ಲೋಪಗಳಿಗೆ ಆಸ್ಪದ ನೀಡದಂತೆ ತಪ್ಪದೇ ಸಮಿತಿಯ ಅವಗಾಹನೆಗೆ ಮಂಡಿಸತಕ್ಕದ್ದು, ಒಂದು ಪಕ್ಷ ಇಂತಹ ಲೋಪದೋಷಗಳಿಗೆ ಆಸ್ಪದ ನೀಡಿದಲ್ಲಿ ಯಾವುದೇ ವೃಂದದ ಅಧಿಕಾರಿಯಾಗಲಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ಅಭಿಪ್ರಾಯಿಸಿರುತ್ತಾರೆ.

ಶ್ರೀ. ಮುರುಗೇಶ್ ಮೊದಲಿಯಾರ್, ಸದಸ್ಯರವರು ಮಾತನಾಡುತ್ತಾ ಆಯುಕ್ತರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಷಯ ನಿರ್ವಾಹಕರ ಪೈಕಿ ಹೆಚ್ಚಿನ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವವರನ್ನು ವರ್ಗಾಹಿಸಲು ಸೂಚಿಸಿದ್ದು, ಆ ಸಂದರ್ಭದಲ್ಲಿಯು ಸಹ ಅಪರ ಆಯುಕ್ತರು (ಆಡಳಿತ) ರವರು ಸದಸ್ಯರೊಂದಿಗೆ ಅನುಚಿತವಾಗಿ ವರ್ತಿಸಿದ್ದು, ಸದರಿ ರವರು ಇಂದಿನ ಸಭೆಯಲ್ಲಿ ಸದಸ್ಯರುಗಳೊಂದಿಗೆ ನಡೆದುಕೊಂಡ ರೀತಿಯು ಖಂಡನೀಯ ಎಂದರೆ ತಪ್ಪಾಗಲಾರದು. ಈ ರೀತಿಯ ವರ್ತನೆಯು ಪುನರಾವರ್ತನೆಯಾಗತಕ್ಕದ್ದಲ್ಲವೆಂದು ಮತ್ತೊಮ್ಮೆ ಅಪರ ಆಯುಕ್ತರು(ಆಡಳಿತ)ರವರಿಗೆ ತೀವ್ರತರನಾದ ಎಚ್ಚರಿಕೆ ನೀಡಲಾಗಿರುತ್ತದೆ.

ಶ್ರೀ. ಮೋಹನ್ ಕುಮಾರ್, ಸದಸ್ಯರವರು ಪರೀಕ್ಷಾರ್ಥ ಸೇವಾ ಅವಧಿ ಹಾಗೂ ಪರೀಕ್ಷಾರ್ಥ ಸೇವಾ ನಿಯಮಗಳ ಕುರಿತಂತೆ ಸಭೆಗೆ ವಿವರಣೆ ನೀಡಲು ಸಹಾಯಕ ಆಯುಕ್ತರು (ಆಡಳಿತ)ರವರಿಗೆ ಸೂಚಿಸಲಾಗಿ ಅವರ ವಿವರಣೆಯು ಸಮರ್ಪಕವಾಗಿರುವುದಿಲ್ಲವೆಂದು ಸಮಿತಿಯು ಅಸಮಾಧಾನ ವ್ಯಕ್ತಪಡಿಸುತ್ತದೆ.

ಅಧ್ಯಕ್ಷರು ಪಾಲಿಕೆಯ ಸಿಬ್ಬಂದಿಗಳಿಗೆ ಸೇವಾ ವಿಷಯಗಳ ಕುರಿತಂತೆ ಏಕೆ ತರಭೇತಿ ನೀಡುತ್ತಿಲ್ಲವೆಂದು ಕೇಳಲಾಗಿ ಈ ಬಗ್ಗೆಯೂ ಸಹ ಅಧಿಕಾರಿಗಳಿಂದ ಸಮಾಧಾನಕರವಾದ ವಿವರಣೆ ಇಲ್ಲದಿರುವುದು ಖಂಡನೀಯ ಹಾಗೂ 3 ವರ್ಷಗಳಿಗಿಂತ ಅಧಿಕವಾಗಿ ಕಾರ್ಯನಿರ್ವಹಿಸುತ್ತಿರುವ ಆಯುಕ್ತರ ಕಛೇರಿ ಸಿಬ್ಬಂದಿಗಳನ್ನು ಕೂಡಲೇ ವರ್ಗಾವಣೆ ಮಾಡತಕ್ಕದೆಂದು ತಿಳಿಸಲಾಯಿತು ಹಾಗೂ ಪಾಲಿಕೆ ಸಿಬ್ಬಂದಿಗಳಿಗೆ ಆಡಳಿತಾತ್ಮಕ ವಿಷಯ ಕುರಿತಂತೆ ತರಭೇತಿ ನೀಡಲು ಕೂಡಲೇ ಕ್ರಮ ಕೈಗೊಳ್ಳಲು ಸಹ ಸೂಚಿಸಲಾಗಿರುತ್ತದೆ.

ಅಧ್ಯಕ್ಷರು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಶ್ರೀ. ಮೋಹನ್ ಕುಮಾರ್, ಸದಸ್ಯರವರು ಪಾಲಿಕೆಯ ಹಿರಿಯ ಅಧಿಕಾರಿಗಳು ಹಾಗೂ ಎರವಲು ಸೇವೆಯ ಮೇಲೆ ಬರುವ ಅಧಿಕಾರಿಗಳು ಆಸ್ತಿ ಮತ್ತು ಋಣಭಾರ ಪ್ರಪತ್ರದ ಮಾಹಿತಿಯನ್ನು ಪ್ರತಿ ವರ್ಷವು ನೀಡುತ್ತಿರುವರೆ ಹಾಗೂ ಈ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆಯೆ ಎಂಬ ಬಗ್ಗೆ ವರದಿ ನೀಡತಕ್ಕದೆಂದು ಹಾಗೂ ತಹಲ್ ವರೆವಿಗೂ ಸದರಿ ಪ್ರಪತ್ರವನ್ನು ನೀಡದೇ ಇರುವ ಅಧಿಕಾರಿಗಳ ವಿವರಣೆಯನ್ನು ಸಹ ಸಮಿತಿಗೆ ಕೂಡಲೇ ಒದಗಿಸತಕ್ಕದೆಂದು ಸಹ ತಿಳಿಸಲಾಗಿರುತ್ತದೆ. ಹಿಂದಿನ ಸಿ.ಎಂ.ಸಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಯಾವ ಹುದ್ದೆಗೆ ನೇಮಕಾತಿ ಹೊಂದಲಾಗಿತ್ತು ಹಾಗೂ ಪ್ರಸ್ತುತ ಅವರುಗಳನ್ನು ಯಾವ ಹುದ್ದೆಗೆ ಪರಿಗಣಿಸಿ ಕಾರ್ಯನಿರ್ವಹಿಸುತ್ತಿರುವ ಎಂಬ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ 7 ದಿವಸಗಳೊಳಗಾಗಿ ಪಟ್ಟಿಯೊಂದಿಗೆ ಮಾಹಿತಿಯನ್ನು ಸಮಿತಿಗೆ ನೀಡತಕ್ಕದೆಂದು ಸೂಚಿಸಲಾಗಿರುತ್ತದೆ.

ಶ್ರೀಮತಿ, ಶಾಂತಕುಮಾರಿ ಸದಸ್ಯರುರವರು, ಪಾಲಿಕೆಯಲ್ಲಿ ಮಂಜೂರಾತಿ ಹುದ್ದೆಗಿಂತ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಎರವಲು ಸೇವೆ ಅಧಿಕಾರಿ/ಸಿಬ್ಬಂದಿಗಳನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲು ಸಹ ತಿಳಿಸಿರುತ್ತಾರೆ ಹಾಗೂ ಹಾಲಿ ವಿದ್ಯಾಧಿಕಾರಿಗಳ ಕಛೇರಿಯು ಜೆ.ಸಿ ರಸ್ತೆಯಲ್ಲಿದ್ದು, ಯಾವುದೇ ಒಂದು ಮಾಹಿತಿಯನ್ನು ಪಡೆಯ ಬೇಕಾಗಿದ್ದಲ್ಲಿ, ಅವರ ಕಛೇರಿಗೆ ಹೋಗಲು ತ್ರಾಸಕರವಾಗಿದ್ದು, ವಿದ್ಯಾಧಿಕಾರಿಗಳ ಕಛೇರಿಯನ್ನು ಮುಖ್ಯ ಕಛೇರಿಯಲ್ಲಿ ಸ್ಥಳವಾಕಾಶ ಕಲ್ಪಿಸಿಕೊಡಲು ಸೂಚಿಸಲಾಗಿರುತ್ತದೆ ಹಾಗೂ ಎಲ್ಲಾ ಶಾಲಾ ಕಾಲೇಜುಗಳಿಗೆ ಗುಮಾಸ್ತರ ಕೊರತೆಯಿದ್ದು ಕೂಡಲೇ ಖಾಲಿ ಇರುವ ಗುಮಾಸ್ತ ಹುದ್ದೆಗಳಿಗೆ ವರ್ಗಾವಣೆಮಾಡಿಕೊಟ್ಟಲ್ಲಿ ಬೋಧಕ ಸಿಬ್ಬಂದಿ ವರ್ಗದವರು ಭೋದಕೇತರ ಕೆಲಸಕಾರ್ಯಗಳನ್ನು ತಪ್ಪಿಸುವಲ್ಲಿ ಯಶಸ್ವಿಯಾಗಬಹುದೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು ಹಾಲಿ ಅಪರ ಆಯುಕ್ತರು(ಆಡಳಿತ) ಹಾಗೂ ಅವರ ಸಿಬ್ಬಂದಿ ವರ್ಗದವರು ಕೇವಲ ವರ್ಗಾವಣೆ ಕಾರ್ಯಗಳಿಗೆ ಮಾತ್ರ ಸೀಮಿತವಾಗಿದ್ದು, ಇತರೆ ಅತಿ ಮುಖ್ಯವಾದ ಕಾರ್ಯಗಳ ಬಗ್ಗೆ ಗಮನ ಹರಿಸದೇ ಇರುವುದು ಶೋಚನೀಯವಾಗಿರುತ್ತದೆ. ಆರಣ್ಯ ಇಲಾಖೆ ಕಛೇರಿಯೇ ಮಂಜೂರಾತಿಯಾಗದೆ ಇದ್ದಾಗ್ಯೂ ಸಹ ಆ ಕಚೇರಿಗೆ ಅಧಿಕಾರಿಗಳು, ಅವರಿಗೆ ಸಿಬ್ಬಂದಿ ವರ್ಗ, ವಾಹನ ಸೌಲಭ್ಯ, ಕಛೇರಿಗೆ ಪೀಠೋಪಕರಣ ಹಾಗೂ ಇತ್ಯಾದಿ ಸಲಕರಣೆಗಳನ್ನು ಒದಗಿಸಿ ಪಾಲಿಕೆಗೆ ಹೆಚ್ಚುವರಿಯಾಗಿ ಆರ್ಥಿಕ ನಷ್ಟವನ್ನುಂಟು ಮಾಡಿರುವುದು ಆಡಳಿತ ವಿಭಾಗದ ವೈಫಲ್ಯವನ್ನು ಎತ್ತಿತೋರುತ್ತದೆ. ಪಾಲಿಕೆಯಲ್ಲಿ ಮಂಜೂರಾತಿ ಹುದ್ದೆಗಳು ಇಲ್ಲದಿದ್ದಾಗ್ಯೂ ಸಹ ಹೆಚ್ಚುವರಿಯಾಗಿ ನೇಮಕ ಹೊಂದುವ ಅಧಿಕಾರಿ/ಸಿಬ್ಬಂದಿಗಳಿಗೆ ಯಾವ ಲೆಕ್ಕಶೀರ್ಷಿಕೆಯಡಿಯಲ್ಲಿ ವೇತನ ಪಾವತಿಸಲಾಗುತ್ತಿದೆ ಎಂಬ ಬಗ್ಗೆ ವಲಯ ಸಹಾಯಕ ನಿಯಂತ್ರಕರು(ಹಣಕಾಸು) ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು 10 ದಿವಸಗಳೊಳಾಗಿ ವರದಿ ನೀಡತಕ್ಕದೆಂದು ಈ ಸಂದರ್ಭದಲ್ಲಿ ತೀಕ್ಷ್ಣವಾಗಿ ತಿಳಿಸಲಾಗಿರುತ್ತದೆ. ಈ ಸಂದರ್ಭದಲ್ಲಿ ಅಪರ ಆಯುಕ್ತರು(ಆಡಳಿತ)ರವರು ಮಾತನಾಡಿ ಎರವಲು ಸೇವೆ ಮೇಲೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ಬಗ್ಗೆ ಕೂಡಲೇ ವರದಿಯನ್ನು ಮಂಡಿಸುವುದಾಗಿಯೂ, ಹುದ್ದೆ ಮಂಜೂರಾತಿ ಇಲ್ಲದಿದ್ದ ಪಕ್ಷದಲ್ಲಿ ಅವರುಗಳಿಗೆ ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ವೇತನ ಪಾವತಿಯಾಗುತ್ತಿದೆ ಎಂಬ ಬಗ್ಗೆಯೂ ಸಹ ವರದಿಯನ್ನು ಮಂಡಿಸುವುದಾಗಿ ತಿಳಿಸಿರುತ್ತಾರೆ.

ಪಾಲಿಕೆಯ ಸಿಬ್ಬಂದಿ ವರ್ಗದವರನ್ನು ಎರವಲು ಸೇವೆಯ ಮೇಲೆ ಇತರೆ ಇಲಾಖೆಗೆ ನೇಮಕ ಮಾಡಿದ್ದು ಈ ಬಗ್ಗೆ ಸಮಿತಿಯ ಅನುಮೋದನೆ ಪಡೆಯದೆ ಕೈಗೊಂಡಿರುವ ಕ್ರಮವು ನಿಯಮಭಾಹಿರವಾಗಿದ್ದು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅವಕಾಶವಿಲ್ಲದಿದ್ದಾಗ್ಯೂ ಸಹ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ.

ಇಂತಹ ಪ್ರಸ್ಥಾವನೆಗಳಿಗೆ ಶಿಫಾರಸ್ಸು ಮಾಡಿರುವ ಸಿಬ್ಬಂದಿ ವರ್ಗದವರ ಪಟ್ಟಿಯನ್ನು ಹಾಗೂ ಎರವಲು ಸೇವೆಯ ಮೇಲೆ ಹೋಗಿರುವ ಪಾಲಿಕೆಯ ನೌಕರರುಗಳ ವಿವರಗಳನ್ನು ಸಹ ಮೂಲ ಕಡತದೊಂದಿಗೆ ಸಮಿತಿಗೆ ಮಂಡಿಸುವುದು. ಸಮಿತಿಯು ಆಡಳಿತ ವಿಭಾಗದಲ್ಲಿ ಅತಿ ಮುಖ್ಯವಾಗಿ ಕಂಡು ಬಂದ ಲೋಪವೊಂದನ್ನು ಗುರುತಿಸಿದ್ದು, ಅಪರ ಆಯುಕ್ತರು (ಅಡಳಿತ)ರವರು ಕೆಲವು ವಿಷಯಗಳ ಕುರಿತಂತೆ ಚರ್ಚಿಸಲು ಸೂಚಿಸಿ, ಸಹಾಯಕ ಆಯುಕ್ತರು (ಅಡಳಿತ)ರವರಿಗೆ ಸುಮಾರು 23 ಕಡತಗಳನ್ನು ಕಳುಹಿಸಲಾಗಿದ್ದು, ಈ ಕಡತಗಳು ಸುಮಾರು 3 ರಿಂದ 4 ತಿಂಗಳ ಅವಧಿಗಳಾಗಿದ್ದು, ಈ ಎಲ್ಲಾ ಕಡತಗಳು ಸಹಾಯಕ ಆಯುಕ್ತರು (ಆಡಳಿತ)ರವರ ಅಲ್ಮಾರದಲ್ಲಿದ್ದು, ಈ ಬಗ್ಗೆ ಉಂಟಾದ ಕಾಲವಿಳಂಬ ಕುರಿತು ಸಹಾಯಕ ಆಯುಕ್ತರು ರವರನ್ನು ಕೋರಲಾಗಿ, ಅವರಿಂದ ಸಮರ್ಪಕವಾದ ರೀತಿಯ ವಿವರಣೆ ಇಲ್ಲದೆ ಇದ್ದು, ಇದು ಹಲವು ಅನುಮಾನಗಳಿಗೆ ಆಸ್ಪದ ನೀಡಿದ್ದು, ಸದರಿ ಅಧಿಕಾರಿಗಳು ದುರುದ್ದೇಶಪೂರಕವಾಗಿ ಕಡತಗಳನ್ನು ವಿಲೇ ಇಟ್ಟಿದ್ದು ಸದರಿರವರ ಮೇಲೆ ಶಿಸ್ತಿನ ಕ್ರಮ ಜರೂಗಿಸಲು ಆಯುಕ್ತರವರಿಗೆ ಸೂಚಿಸಲಾಯಿತು. ಅಧ್ಯಕ್ಷರು ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರ ಕುಂದು ಕೋರತೆಗಳನ್ನು ಕೇಳಲಾಗಿ ಎಲ್ಲಾ ವಿಷಯ ನಿರ್ವಾಹಕರಿಗೆ ಹೆಚ್ಚುವರಿ ಹುದ್ದೆಗಳ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನೇಮಕ ಮಾಡಿದ್ದು, ಇದರಿಂದಾಗಿ ಅವರ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಲು ಕಷ್ಟಕರವಾಗಿರುವುದರಿಂದ ಹಾಗೂ ಮಾಹಿತಿ ಹಕ್ಕು ಆಯೋಗದ ಮುಂದೆ ನಡೆಯುವ ವಿಚಾರಣೆಗಳಿಗೆ ಹಾಜರಾಗಬೇಕಾಗಿರುವುದರಿಂದ ಇಂತಹ ಸಂದರ್ಭಗಳಲ್ಲಿ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಲು ಕಷ್ಟವಾಗುವುದರಿಂದ ಈ ಕಛೇರಿಗೆ ಮತ್ತಷ್ಟು ಗುಮಾಸ್ತರನ್ನು ನೇಮಕ ಮಾಡಬೇಕೆಂತಲು ಹಾಗೂ ಕಛೇರಿ ಎಲ್ಲಾ ಸಿಬ್ಬಂದಿ ವರ್ಗದವರು ಕೆಲಸ ನಿರ್ವಹಿಸಲು ಸ್ಥಳಾವಕಾಶವಿಲ್ಲದೆ ಇರುವುದರಿಂದ ತಮ್ಮಗಳಿಗೆ ಸೂಕ್ತ ಸ್ಥಳಾವಕಾಶ ಒದಗಿಸಿಕೊಡಬೇಕೆಂದು ಕೋರಿದ್ದು, ಸಮಿತಿಯು ಆಡಳಿತ ಶಾಖೆಯ ಸಿಬ್ಬಂದಿಗಳ ಮನವಿಯನ್ನು ಪುರಸ್ಕರಿಸಿ ತಕ್ಷಣವೆ ಅವರುಗಳಿಗೆ ಸೂಕ್ತ ಸ್ಥಳಾವಕಾಶ ಒದಗಿಸಿ ಕೊಡಲು ಅಪರ ಆಯುಕ್ತರು (ಆಡಳಿತ)ರವರಿಗೆ ಸೂಚಿಸಲಾಗಿರುತ್ತದೆ.

ಅಂತಿಮವಾಗಿ ಅಧ್ಯಕ್ಷರು ಅಪರ ಆಯುಕ್ತರು(ಆಡಳಿತ)ರವರಿಗೆ ಸೂಕ್ತ ಸೂಚನೆಯನ್ನು ನೀಡುತ್ತಾ ಪಾಲಿಕೆಯ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರು ತಪ್ಪದೇ ಗುರುತಿನ ಚೀಟಿಯನ್ನು ಧರಿಸತಕ್ಕದೆಂತಲು, 4ನೇ ದರ್ಜೆಯ ನೌಕರರುಗಳು ಕಡ್ಡಾಯವಾಗಿ ಸಮವಸ್ತ್ರ ಧರಿಸ ಬೇಕೆಂತಲು, ಗಣಕ ಯಂತ್ರ ನಿರ್ವಾಹಕರು ಸಹ ತಮ್ಮ ಸಂಸ್ಥೆಯಿಂದ ಗುರುತಿನ ಚೀಟಿಯನ್ನು ಪಡೆದು ಕಡ್ಡಾಯವಾಗಿ ಧರಿಸತಕ್ಕದೆಂತಲು, ಸಾರ್ವಜನಿಕರು ಮದ್ಯಾಹ್ನ 3 ಗಂಟೆ ನಂತರ ಮಾತ್ರ ಕಛೇರಿಗೆ ಪ್ರವೇಶಿಸತಕ್ಕದೆಂತಲು, ಸಿಬ್ಬಂದಿ ವರ್ಗದವರು ನಿಗಧಿತ ಅವಧಿಗೆ ಸರಿಯಾಗಿ ಕಛೇರಿಗೆ ಹಾಜರಾಗತಕ್ಕದೆಂತಲು ತಿಳಿಸಿ ಈ ಸಭೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
6. *ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
7. *ಮುಖ್ಯ ಲೆಕ್ಕಾಧಿಕಾರಿಗಳು, ರವರಿಗೆ ಕಳುಹಿಸುತ್ತಾ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.*
8. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 18-06-2012 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಜಂಟಿ ಆಯುಕ್ತರು (ರಾಜರಾಜೇಶ್ವರಿ ನಗರ ವಲಯ) |
| 2 | ನಾಜಿನಿ ಬೇಗಂ | ಸದಸ್ಯರು | ಜಂಟಿ ಆಯುಕ್ತರು (ಯಲಹಂಕ ವಲಯ) |
| 3 | ಮೋಹನ್ ಕುಮಾರ್ | ಸದಸ್ಯರು | ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) |
| 4 | ಜೆ. ಭುವನೇಶ್ವರಿ | ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ ವಲಯ) |
| 5 | ಎಲ್.ನಾಗರತ್ನ | ಸದಸ್ಯರು | ಜಂಟಿ ಆಯುಕ್ತರು (ಮಹದೇವಪುರ ವಲಯ) |
| 6 | ರವೀಂದ್ರನ್ ಕೆ | ಸದಸ್ಯರು | ಉಪ ಆಯುಕ್ತರು(ಆಡಳಿತ) |
| 7 | ಎನ್. ಶಾಂತಕುಮಾರಿ | ಸದಸ್ಯರು | ಉಪ ಆಯುಕ್ತರು(ಪೂರ್ವ/ಪಶ್ಚಿಮ/ಬೊಮ್ಮನಹಳ್ಳ/ದಕ್ಷಿಣ ವಲಯ) |
| | | | ಕೇಂದ್ರ ಸ್ಥಾನಿಕ ಸಹಾಯಕರು, (ಪಶ್ಚಿಮ) |
| | | | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| | | | ವಿಶೇಷ ಅಧಿಕಾರಿ |
| | | | <u>ಗೈರು ಹಾಜರಿದ್ದ ಅಧಿಕಾರಿಗಳು</u> |
| | | | ಅಪರ ಆಯುಕ್ತರು(ಆಡಳಿತ) |
| | | | ಅಪರ ಆಯುಕ್ತರು(ಪೂರ್ವ ವಲಯ) |
| | | | ಜಂಟಿ ಆಯುಕ್ತರು(ದಕ್ಷಿಣ/ಪಶ್ಚಿಮ ವಲಯ) |
| | | | ಉಪ ಆಯುಕ್ತರು (ಯಲಹಂಕ/ಮಹದೇವಪುರ/ರಾಜರಾಜೇಶ್ವರಿನಗರ ವಲಯ) |

ಅಧ್ಯಕ್ಷರು ಸಭೆಗೆ ಆಗಮಿಸಿದ ಸಮಿತಿಯ ಸದಸ್ಯರುಗಳು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಯಾವುದೆ ಮುನ್ಸೂಚನೆ ನೀಡದೆ ಕೆಲವು ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿರುವುದನ್ನು ತೀವ್ರವಾಗಿ ಆಕ್ಷೇಪಿಸುತ್ತಾ ಗೈರು ಹಾಜರಾಗಿದ್ದ ಅಧಿಕಾರಿಗಳ ವಿರುದ್ದ ಶಿಸ್ತು ಕ್ರಮ ಕೈಗೊಳ್ಳಲು ಆಯುಕ್ತರನ್ನು ಕೋರಲು ಅಭಿಪ್ರಯಿಸಿದರು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪೈಕಿ ಯಾರೊಬ್ಬರು ಸಹ ಗುರುತಿನ ಚೀಟಿಯನ್ನು ಧರಿಸದೆ ಇರುವುದನ್ನು ಕಂಡು ಇತ್ತೀಚಿಗೆ ಆಯುಕ್ತರ ಕಛೇರಿಯಿಂದ ಹೊರಡಿಸಲಾಗಿದ್ದ ಸುತ್ತೋಲೆಯನ್ನು ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ನೀಡಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ಉನ್ನತ ಅಧಿಕಾರಿಗಳೇ ಆಯುಕ್ತರ ಆದೇಶವನ್ನು ಪಾಲಿಸದೆ ಇದ್ದಲ್ಲಿ, ಕೆಳಹಂತದ ಅಧಿಕಾರಿ/ಸಿಬ್ಬಂದಿ ವರ್ಗದವರು ಕಛೇರಿಯ ಶಿಸ್ತನ್ನು ಪಾಲಿಸುವಂತೆ ಸೂಚಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯಿಸುತ್ತಾ, ಇನ್ನು ಮುಂದೆ ತಾವುಗಳೂ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸೇರಿದಂತೆ ತಮ್ಮ ಅಧೀನ ಸಿಬ್ಬಂದಿಗಳು ಕಛೇರಿ ವೇಳೆಯಲ್ಲಿ ಗುರುತಿನ ಚೀಟಿಯನ್ನು ಹಾಗೂ 4ನೇ ದರ್ಜೆ ನೌಕರರುಗಳು ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಕೇಂದ್ರ ಕಛೇರಿಯ, ವಲಯ ಕಛೇರಿಗಳ ಹಾಗೂ ಉಪ ವಿಭಾಗ ಕಛೇರಿಗಳ ಮುಂಭಾಗದಲ್ಲಿ ಅಧಿಕಾರಿಗಳ ಹಾಗೂ ಸಂಬಂಧಪಟ್ಟ ಕಛೇರಿಗಳ ಪೂರ್ಣ ವಿವರಗಳನ್ನೊಳಗೊಂಡ ನಾಮ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡಲಾಗುವುದೆಂದು ಅಧ್ಯಕ್ಷರು ಎಚ್ಚರಿಕೆ ನೀಡಿದರು.

ಶ್ರೀ. ಮೋಹನ್ ಕುಮಾರ್, ಸದಸ್ಯರವರು ಮಾತನಾಡುತ್ತಾ, ಕಿಯೋನಿಕ್ಸ್ ಹಾಗೂ ಇತರೆ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಎಲ್ಲಾ ಕಛೇರಿಗಳಲ್ಲೂ ಪ್ರತ್ಯೇಕವಾದ ಹಾಜರಾತಿ ಪುಸ್ತಕವನ್ನು ನಿರ್ವಹಿಸತಕ್ಕದ್ದು ಹಾಗೂ ಅವರುಗಳ ಹೊರಗುತ್ತಿಗೆ ಸಂಸ್ಥೆಯಿಂದಲೆ ಗುರುತಿನ ಚೀಟಿಯನ್ನು ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ಹಾಗೂ ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಿದರು ಹಾಗೂ ಶ್ರೀಮತಿ. ನಾಜ್ನಿನ ಬೇಗಂರವರು ಅನಧಿಕೃತ ವ್ಯಕ್ತಿಗಳಿಂದ ಗಣಕ ಯಂತ್ರ ಸಹಾಯಕರುಗಳ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಅನೇಕ ದೂರುಗಳು ಇರುವ ಹಿನ್ನೆಲೆಯಲ್ಲಿ ಎಲ್ಲಾ ಬಟವಾಡೆ ಅಧಿಕಾರಿಗಳು ಅವರಗಳ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಸಹಾಯಕರುಗಳು ಅಧಿಕೃತವಾಗಿ ಹೊರಗುತ್ತಿಗೆ ಸಂಸ್ಥೆಗಳಿಂದ ನಿಯೋಜಿಸಲ್ಪಟ್ಟಿರುವರೇ ಎಂಬ ಬಗ್ಗೆ ದೃಢೀಕರಿಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ.

ಅಧ್ಯಕ್ಷರು, ಕಂದಾಯ ಇಲಾಖೆಯ ಸಹಾಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ಸಹಾಯಕರುಗಳ ಕಾರ್ಯವೈಖರಿ ಬಗ್ಗೆ ಹಲವಾರು ದೂರುಗಳು ಇರುವ ಹಿನ್ನೆಲೆಯಲ್ಲಿ ಅವರ ಅವಶ್ಯಕತೆ ಬಗ್ಗೆ ವಿವರಣೆ ಕೇಳಲಾಗಿ, ಉಪ ಆಯುಕ್ತರು (ದಕ್ಷಿಣ) ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು (ಪಶ್ಚಿಮ)ರವರುಗಳು ಸಹಾಯ ಕೇಂದ್ರಗಳಲ್ಲಿ ಕಂದಾಯ ವಸೂಲಾತಿ ಕಾರ್ಯವು ನಡೆಯುತ್ತಿದ್ದು, ಸಂಬಂಧಪಟ್ಟ ಕಂದಾಯ ವಸೂಲಿಗಾರರಿಗೆ ಸೂಕ್ತ ತರಬೇತಿ ನೀಡಿದ್ದಲ್ಲಿ ಹೊರಗುತ್ತಿಗೆ ಗಣಕ ಯಂತ್ರ ಸಹಾಯಕರುಗಳ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಪಾಲಿಕೆಯ ಕಂದಾಯ ವಸೂಲಿಗಾರರುಗಳಿಗೆ ಹೆಚ್ಚುವರಿ ಭತ್ಯೆಯನ್ನು ನೀಡಿದಲ್ಲಿ ಸಹಾಯಕ ಕೇಂದ್ರಗಳಲ್ಲಿ ನಡೆಯುತ್ತಿರುವ ಅನೇಕ ಅಕ್ರಮಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ ಎಂದು ಸಮಿತಿಗೆ ತಿಳಿಸಿದ್ದು, ಈ ಸಂಬಂಧ ಅಧ್ಯಕ್ಷರು ಪಾಲಿಕೆಯ ಎಲ್ಲಾ ಕಂದಾಯ ವಸೂಲಿಗಾರರುಗಳಿಗೆ ಹಾಗೂ ಕಂದಾಯ ಪರಿವೀಕ್ಷಕರುಗಳಿಗೆ ಆನ್‌ಲೈನ್‌ನಲ್ಲಿ ಕಂದಾಯವನ್ನು ವಸೂಲಿ ಮಾಡುವ ಸಂಬಂಧ ಸೂಕ್ತ ತರಬೇತಿಯನ್ನು ನೀಡಿ ಸಹಾಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಗಣಕಯಂತ್ರ ಸಹಾಯಕರುಗಳನ್ನು ಬಿಡುಗಡೆಗೊಳಿಸಿ, ಚುನಾವಣೆ ಕೆಲಸಕಾರ್ಯಗಳು, ಜನಗಣತಿ ಕಾರ್ಯ ಹಾಗೂ ಇತರೆ ಕೆಲಸಕಾರ್ಯಗಳಿಗೆ ಗಣಕಯಂತ್ರದಲ್ಲಿ ಪರಿಣಿತಿ ಹೊಂದಿರುವವರನ್ನು ಅತಿ ಜರೂರಾಗಿ ನಿಯೋಜಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಉಪ ಆಯುಕ್ತರು (ಆಡಳಿತ)ರವರಿಗೆ ಸೂಚಿಸಲಾಯಿತು.

ಜಂಟಿ ಆಯುಕ್ತರು(ರಾಜರಾಜೇಶ್ವರಿನಗರ ವಲಯ) ಹಾಗೂ ಜಂಟಿ ಆಯುಕ್ತರು (ಯಲಹಂಕ ವಲಯ)ರವರುಗಳು ಸಭೆಗೆ ವಿವರಿಸುತ್ತಾ, ಪಾಲಿಕೆಯ ಎಲ್ಲಾ ವೃಂದದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಅವಶ್ಯಕತೆ ಇದ್ದು 6 ತಿಂಗಳಿಗೊಮ್ಮೆ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳುವುದು ಹಾಗೂ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ ನೌಕರರುಗಳಿಗೆ ಕಡ್ಡಾಯವಾಗಿ ಆಡಳಿತಾತ್ಮಕ ತರಬೇತಿಯನ್ನು ಕೊಡಿಸಿದಲ್ಲಿ ಕಛೇರಿಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ. ಈ ಸಂಬಂಧ ಅಧ್ಯಕ್ಷರು ಕೂಡಲೇ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಆಡಳಿತಾತ್ಮಕ ವಿಚಾರವಾಗಿ ಹಾಗೂ ಸರ್ಕಾರದ ಇತ್ತೀಚಿನ ಸುತ್ತೋಲೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ತರಬೇತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವಂತೆ ಹಾಗೂ ಸರ್ಕಾರದ ಇತರೆ ಇಲಾಖೆಗಳಂತೆ ಪಾಲಿಕೆಯಲ್ಲಿಯೂ ಸಹ ಕಾಲಕಾಲಕ್ಕೆ ತರಭೇತಿ ನೀಡಲು ಕ್ರಮ ಕೈಗೊಂಡು ಸಮಿತಿಗೆ ವರದಿ ಸಲ್ಲಿಸುವಂತೆ ಉಪ ಆಯುಕ್ತರು(ಆಡಳಿತ)ರವರಿಗೆ ಸೂಚಿಸಲಾಯಿತು.

ಶ್ರೀ. ಮೋಹನ್ ಕುಮಾರ್, ಸದಸ್ಯರು ರವರು ಮಾತನಾಡುತ್ತಾ, ಘನ ಸರ್ಕಾರದ ಇತ್ತೀಚಿನ ಅಧಿನಿಯಮ (KCS (computer literacy rules) -2012) ರಂತೆ 'ಸಿ' ವೃಂದಕ್ಕಿಂತ ಮೇಲ್ಪಟ್ಟ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಕಡ್ಡಾಯವಾಗಿ ಗಣಕಯಂತ್ರದ ಜ್ಞಾನ ಇರಬೇಕಾಗಿದ್ದು, ಈ ಸಂಬಂಧ ಪಾಲಿಕೆಯಲ್ಲಿಯೂ ಸಹ ಸದರಿ ಅಧಿನಿಯಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಂಡಲ್ಲಿ ಕಛೇರಿಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಸಬಹುದೆಂದು ಅಭಿಪ್ರಾಯಿಸಿರುತ್ತಾರೆ. ಇದಕ್ಕೆ ಅಧ್ಯಕ್ಷರು ಸಹ ತಮ್ಮ ಸಹಮತಿ ವ್ಯಕ್ತಪಡಿಸಿದ್ದು, ಸದರಿ ಅಧಿನಿಯಮದೊಂದಿಗೆ ಘನ ಸರ್ಕಾರದ ಇತ್ತೀಚಿನ ಕೆಲವು ತಿದ್ದುಪಡಿ ನಿಯಮಗಳನ್ನು ಪಾಲಿಕೆಯ ಆಡಳಿತದಲ್ಲಿ ಅನುಷ್ಠಾನಗೊಳಿಸುವ ಕುರಿತು ಕೂಡಲೇ ಕ್ರಮ ಕೈಗೊಳ್ಳುವಂತೆ ಆಯುಕ್ತರನ್ನು ಕೋರಲು ಸಮಿತಿಯು ತೀರ್ಮಾನಿಸಲಾಯಿತು.

ಅಧ್ಯಕ್ಷರು ಮಾತನಾಡುತ್ತಾ, ಎಲ್ಲಾ ವಲಯಕ್ಕೆ ಸಂಬಂಧಿಸಿದ ಕಛೇರಿಗಳಲ್ಲಿ ಹಾಜರಾತಿ ಪುಸ್ತಕ, Late Attendance Register, Movement-Register ಹಾಗೂ ಇತರೆ ವಹಿಗಳನ್ನು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಂದ ದೃಢೀಕರಿಸಲಾಗಿದೆಯೆ ಎಂಬ ಬಗ್ಗೆ ಪರಿಶೀಲಸಿ, ಎಲ್ಲಾ ಕಛೇರಿಗಳಲ್ಲೂ ಸಹ ತಪಾಸಣೆ ವಹಿಯನ್ನು (Inspection Register) ನಿರ್ವಹಿಸಿ ಮೇಲಾಧಿಕಾರಿಗಳು ಕಾಲಕಾಲಕ್ಕೆ ಉಪ ವಿಭಾಗ ಕಛೇರಿಗಳ ತಪಾಸಣೆ ನಡೆಸಿದ ಸಂದರ್ಭದಲ್ಲಿ ತಪಾಸಣೆವಹಿಯಲ್ಲಿ ಕಡ್ಡಾಯವಾಗಿ ದಾಖಲಿಸುವಂತೆ ಸೂಚಿಸಲು ಹಾಜರಿದ್ದ ಎಲ್ಲಾ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಿದರು.

ಜಂಟಿ ಆಯುಕ್ತರು (ದಾಸರಹಳ್ಳಿ ವಲಯ)ರವರು ದಾಸರಹಳ್ಳಿ ವಲಯ ಕಛೇರಿಯಲ್ಲಿ ಸುಮಾರು 115 ಜನ ವಾಟರ್‌ಮೆನ್‌ಗಳಿದ್ದು, ಇವರುಗಳಿಗೆ ಯಾವುದೇ ಕೆಲಸಗಳಿಲ್ಲದೇ ಇದ್ದು, ಇವರುಗಳನ್ನು ಅವಶ್ಯಕತೆ ಇರುವಂತಹ ವಲಯಗಳಿಗೆ ವರ್ಗಾಹಿಸಬಹುದೆಂದು ಸಭೆಗೆ ತಿಳಿಸಲಾಗಿದ್ದು, ಶ್ರೀಮತಿ ನಾಗರತ್ನ, ಸದಸ್ಯರವರು ಸದರಿ ನೌಕರರುಗಳು ವಾಸಿಸುತ್ತಿರುವ ವಿಳಾಸಗಳನ್ನು ಗುರುತಿಸಿ ಅದರ ಸಮೀಪ ಬರುವಂತಹ ವಲಯಗಳಿಗೆ ವರ್ಗಾಹಿಸಿದಲ್ಲಿ ನೌಕರರುಗಳು ಸಮಯಕ್ಕೆ ಸರಿಯಾಗಿ ಕಛೇರಿಗೆ ಹಾಜರಾಗಲು ಅನುವು ಮಾಡಿಕೊಟ್ಟಂತಾಗುವುದೆಂದು ತಿಳಿಸಿದ್ದು, ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ)ರವರು ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಸದರಿ ನೌಕರರುಗಳ ಅವಶ್ಯಕತೆ ಇದ್ದು, ಹೆಚ್ಚುವರಿ ವಾಟರ್‌ಮೆನ್‌ಗಳನ್ನು ಬೊಮ್ಮನಹಳ್ಳಿ ವಲಯಕ್ಕೆ ನಿಯೋಜಿಸಲು ಕೋರಿದರು. ಅದರಂತೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಉಪ ಆಯುಕ್ತರು (ಆಡಳಿತ)ರವರಿಗೆ ಸೂಚಿಸಲಾಯಿತು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಜಂಟಿ ಆಯುಕ್ತರು (ಮಹದೇವಪುರ ವಲಯ)ರವರು ವಲಯ ವ್ಯಾಪ್ತಿಯಲ್ಲಿ 14 ಕಂದಾಯ ವಸೂಲಿಗಾರರ ಹುದ್ದೆಗಳು, 16 ಕಂದಾಯ ಪರಿವೀಕ್ಷಕರ ಹುದ್ದೆಗಳು ಹಾಗೂ ಸಹಾಯಕ ಅಭಿಯಂತರರ ಹುದ್ದೆಗಳು ಖಾಲಿಇದ್ದು, ಇದರಿಂದಾಗಿ ಕಛೇರಿ ಕೆಲಸಕಾರ್ಯಗಳು ಕುಂಠಿತವಾಗಿದ್ದು ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳುವಂತೆ ಸಭೆಗೆ ಕೋರಿದರು ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು (ಪಶ್ಚಿಮ)ರವರು ಪಾಲಿಕೆಯಲ್ಲಿ ಸುಮಾರು ವರ್ಷಗಳಿಂದ ಹಲವಾರು ಅಧಿಕಾರಿಗಳು ನಿಯಮ 68ರಡಿಯಲ್ಲಿ ಪ್ರಭಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು ಅವರುಗಳನ್ನು ಮುಂಬಡ್ತಿ ನೀಡಿ ತತ್ಸಮಾನ ಹುದ್ದೆಗಳಿಗೆ ಸಕ್ರಮಗೊಳಿಸಿದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸದರಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಕೆಲಸಕಾರ್ಯಗಳನ್ನು ನಿರ್ವಹಿಸಲಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದು, ಈ ಸಂಬಂಧ ಅಧ್ಯಕ್ಷರು ಹಾಜರಿದ್ದ ಎಲ್ಲಾ ಅಪರ/ಜಂಟಿ ಆಯುಕ್ತರುಗಳಿಗೆ ತಮ್ಮ ತಮ್ಮ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು (ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು, ಮಂಜೂರಾತಿ ಇಲ್ಲದೆ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಹುದ್ದೆಗಳೊಂದಿಗೆ) ದಿನಾಂಕ:23.06.2012ರ ಒಳಗಾಗಿ ಸಮಿತಿಯ ಅವಗಾಹನೆಗೆ ತರಲು ಸೂಚಿಸಲಾಯಿತು. ನಿಯಮ 68ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧ ಕೂಡಲೆ ಸದರಿ ಅಧಿಕಾರಿಗಳ ಮುಂಬಡ್ತಿಗೆ ಸಂಬಂಧಪಟ್ಟಂತೆ ನಿಯಮಾನುಸಾರ ನೇರನೇಮಕಾತಿ ಮತ್ತು ಮುಂಬಡ್ತಿ ಮೀಸಲುಗಳನ್ನು ಅನುಸರಿಸಿ ಸೇವಾ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಿ ಮುಂಬಡ್ತಿ ನೀಡಲು ಕೂಡಲೆ ಕ್ರಮ ಕೈಗೊಳ್ಳುವಂತೆ ಉಪ ಆಯುಕ್ತರು (ಆಡಳಿತ)ರವರಿಗೆ ಸೂಚಿಸಿದರು.

ಜಂಟಿ ಆಯುಕ್ತರು (ಯಲಹಂಕ ವಲಯ) ರವರು ಸಭೆಗೆ ವಿವರಿಸುತ್ತಾ ಪಾಲಿಕೆಯಲ್ಲಿ ಕಂದಾಯ ವಸೂಲಾತಿ ಕಾರ್ಯವು ಕುಂಠಿತವಾಗಿದ್ದು, ಸರ್ಕಾರದ ಕಂದಾಯ ಇಲಾಖೆಯಲ್ಲಿರುವಂತೆ ಕಂದಾಯ ವಸೂಲಿಕಾರ್ಯವನ್ನು Land Revenue Act ನಂತೆ ವಸೂಲಾತಿ ಮಾಡಿಕೊಂಡ ಪಕ್ಷದಲ್ಲಿ ತೆರಿಗೆ ವಂಚಿಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಆದ್ದರಿಂದ Land Revenue Act ಅನ್ನು ಪಾಲಿಕೆಯಲ್ಲಿ ಅಳವಡಿಸುವ ಸಂಬಂಧ ಕೂಡಲೇ ಕ್ರಮ ಕೈಗೊಂಡು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಪ ಆಯುಕ್ತರು (ಆಡಳಿತ)ರವರಿಗೆ ಅಧ್ಯಕ್ಷರು ಸೂಚಿಸಿದರು.

ಉಪ ಆಯುಕ್ತರು (ಪಶ್ಚಿಮ)ವಲಯ ರವರು, ಹಾಲಿ ಕೆಲವು ವಲಯ ಕಛೇರಿಗಳಲ್ಲಿ ನಗರ ಯೋಜನೆ ಸಹಾಯಕ ನಿರ್ದೇಶಕರ ಮಂಜೂರಾದ ಹುದ್ದೆಯು ಕೇವಲ 1 ಮಾತ್ರವಿದ್ದು, ಆದರೆ ಹೆಚ್ಚುವರಿಯಾಗಿ 5 ರಿಂದ 6 ಜನ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಆನ್‌ಲೈನ್ ಮೂಲಕ ನಕ್ಷೆಮಂಜೂರಾತಿ ಕಾರ್ಯವು ನಡೆಯುತ್ತಿದ್ದು, ಹೆಚ್ಚುವರಿ ಹುದ್ದೆಗಳನ್ನು ರದ್ದುಪಡಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಶ್ರೀಮತಿ. ಜೆ.ಭುವನೇಶ್ವರಿ, ಸದಸ್ಯರವರು ಮಾತನಾಡಿ, ಪಾಲಿಕೆಯ ಎಲ್ಲಾ ಕಟ್ಟಡಗಳಿಗೂ ಒಂದೇ ಮಾದರಿಯ ಬಣ್ಣವನ್ನಚ್ಚಿದಲ್ಲಿ ಸಾರ್ವಜನಿಕರು ಪಾಲಿಕೆಯ ಆಸ್ತಿಯೆಂದು ಗುರಿತಿಸಲು ಅನುವು ಮಾಡಿಕೊಟ್ಟಂತಾಗುವುದೆಂದು ತಿಳಿಸಿದ್ದು, ಈ ಮೇರೆಗೆ ಅಪರ ಆಯುಕ್ತರು(ಬೊಮ್ಮನಹಳ್ಳಿ)ರವರು ಪ್ರಸ್ತುತ ಬೆಂಗಳೂರ ನಗರ ವನ್ನು ಗ್ರೀನ್ ಸಿಟಿ ಎಂದು ಕರೆಯುತ್ತಿದ್ದು, ಪಾಲಿಕೆಯ ಕಟ್ಟಡದ ಹೊರಭಾಗಕ್ಕೆ ಹಸಿರು ಬಣ್ಣವನ್ನು ಬಳಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಶ್ರೀ ರವೀಂದ್ರ, ಸದಸ್ಯರವರು, ಹಿಂದಿನ ಆಯುಕ್ತರು ಬೃಹತ್ ಮೊತ್ತದ ಆಸ್ತಿ ತೆರಿಗೆ ಪಾವತಿ ಮಾಡದೆ ಇರುವ ಕಟ್ಟಡದ ಮುಂದೆ ತಮಟೆ ಭಾರಿಸುವ ಮೂಲಕ ಕಂದಾಯ ವಸೂಲಾತಿ ಬಗ್ಗೆ ಕ್ರಮ ಕೈಗೊಂಡಿದ್ದು, ಇದು ಯಾವ ರೀತಿಯಲ್ಲಿ ಅನುಕೂಲವಾಗಿದೆ ಎಂಬ ಬಗ್ಗೆ ಸಭೆಗೆ ವಿವರಿಸಿಲು ಕೋರಿದ್ದು, ಜಂಟಿ ಆಯುಕ್ತರು (ಬೊಮ್ಮನಹಳ್ಳಿ)ರವರು ಈ ಒಂದು ಪ್ರಕ್ರಿಯೆಯಿಂದಾಗಿ ಸುಮಾರು 149 ಕೋಟಿ ರೂಗಳಷ್ಟು ಬಾಕಿ ಇದ್ದಂತಹ ಆಸ್ತಿ ತೆರಿಗೆಯು ವಸೂಲಾತಿಯಾಗಿದೆ ಎಂದು ಸಭೆಗೆ ವಿವರಿಸಿರುತ್ತಾರೆ.

ಅಧ್ಯಕ್ಷರು ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿ ವರ್ಗದವರಿಗೂ ಶಿಸ್ತನ್ನು ಪಾಲಿಸುವಲ್ಲಿ ತಾವುಗಳು ಮೇಲ್ಪಂಕ್ತಿಯಾಗಿ ತಮ್ಮ ಅಧೀನ ಸಿಬ್ಬಂದಿಗಳು ತಮಗೆ ವಹಿಸಿರುವ ಕಛೇರಿ ಕೆಲಸಕಾರ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುವಂತೆ ಕಾಲಕಾಲದಲ್ಲಿ ಸೂಚಿಸಲು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
5. *ಅಪರ ಆಯುಕ್ತರು (ಆಡಳಿತ)ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ.*
6. *ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ರವರುಗಳಿಗೆ ಕಳುಹಿಸುತ್ತ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.*
7. *ಉಪ ಆಯುಕ್ತರು (ಆಡಳಿತ)ರವರಿಗೆ ಕಳುಹಿಸುತ್ತ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.*
8. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 23-06-2012ರ ಶನಿವಾರದಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಜಂಟಿ ಆಯುಕ್ತರು (ಯಲಹಂಕ)ವಲಯ ಕಛೇರಿಯ ಅನಿರೀಕ್ಷಿತ ತಪಾಸಣಾ ವರದಿ

| ಕ್ರ ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಉಪ ಆಯುಕ್ತರು, ಯಲಹಂಕ ವಲಯ |
| 2 | ಎನ್. ಶಾಂತಕುಮಾರಿ | ಸದಸ್ಯರು | ಮುಖ್ಯ ಅಭಿಯಂತರು |
| 3 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿ |
| 4 | ಎಸ್.ಎಂ. ಮುರುಗೇಶ್ ಮೊದಲಿಯರ್ | ಸದಸ್ಯರು | ಆಯುಕ್ತರ ಕಛೇರಿ ನೋಡಲ್ ಅಧಿಕಾರಿಗಳು |
| 5 | ಅಬ್ದುಲ್ ರಖೀಬ್ ಝಕೀರ್ | ಸದಸ್ಯರು | ಕಾರ್ಯಪಾಲಕ ಅಭಿಯಂತರರು, (ಯೋಜನೆ) |
| 6 | ನಾಜಿನಿ ಬೇಗಂ | ಸದಸ್ಯರು | ಕಂದಾಯ ಅಧಿಕಾರಿ |
| 7 | ಭುವನೇಶ್ವರಿ | ಸದಸ್ಯರು | ಸಹಾಯಕ ನಿರ್ದೇಶಕರು, ನಗರ ಯೋಜನೆ |
| 8 | ಎಲ್.ನಾಗರತ್ನ | ಸದಸ್ಯರು | |

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಈ ದಿವಸ ಬೆಳಿಗ್ಗೆ 10.30 ರ ಸಮಯಕ್ಕೆ ಜಂಟಿ ಆಯುಕ್ತರು ಯಲಹಂಕ ವಲಯ ಕಛೇರಿಗೆ ತಪಾಸಣೆ ಕೈಗೊಂಡಿದ್ದು, ಕಛೇರಿಯಲ್ಲಿದ್ದ ಸಿಬ್ಬಂದಿವರ್ಗದವರು ಯಾರೊಬ್ಬರು ಗುರುತಿನ ಚೀಟಿ ಧರಿಸದೇ ಇರುವುದು, 4ನೇ ದರ್ಜೆ ನೌಕರರುಗಳು ಸಮವಸ್ತ್ರ ಧರಿಸದೆ ಈ ಕಛೇರಿಯಲ್ಲಿ ಏಜಂಟರ್‌ಗಳಂತೆ ವರ್ತಿಸುತ್ತಿರುವುದು ಕಂಡು ಬಂದಿರುತ್ತದೆ. ಹಾಜರಾತಿ ಪುಸ್ತಕವನ್ನು ಪರಿಶೀಲಿಸಿದಾಗ ಕೆಲವು ನೌಕರರುಗಳು ಸಹಿಯನ್ನು ಮಾಡಿ ಕಛೇರಿಯಲ್ಲಿ ಇಲ್ಲದೇ ಇರುವುದು, ವಲಯ ಜಂಟಿ ಆಯುಕ್ತರ ಹಾಗೂ ಉಪ ಆಯುಕ್ತರ ಚಾಲಕರುಗಳು ಹಾಜರಾತಿ ಪುಸ್ತಕದಲ್ಲಿ ಸಹಿಯನ್ನು ಮಾಡದೇ ಬೇಜವಾಬ್ದಾರಿಯಿಂದ ಇರುವುದು ಕಂಡು ಬಂದಿರುತ್ತದೆ. ಕಛೇರಿಯ ಪ್ರಥಮ ದರ್ಜೆ ಗುಮಾಸ್ತರಾದ ಶ್ರೀ.ಮುತ್ತುರಾಜು ಹಾಗೂ ಶ್ರೀ. ಮಹಂತೇಶ್ ಆರೋಗ್ಯ ಪರಿವೀಕ್ಷಕ (ಉಪ ಆಯುಕ್ತರುರವರ ಆಪ್ತ ಸಹಾಯಕ) ರವರು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೇ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಕಛೇರಿ ಸಿಬ್ಬಂದಿಗಳನ್ನು ಕೇಳಲಾಗಿ ಸದರಿಯವರುಗಳು ಜಂಟಿ ಆಯುಕ್ತರಿಗೆ ನೇರವಾಗಿ ದೂರವಾಣಿ ಮುಖಾಂತರ ರಜೆ ಎಂದು ತಿಳಿಸಿರುವುದಾಗಿ ಹೇಳಿದ್ದು, ಆ ಸಂದರ್ಭದಲ್ಲಿ ಜಂಟಿ ಆಯುಕ್ತರನ್ನು ಕೇಳಲಾಗಿ ತಮ್ಮ ಬಳಿ ಯಾರು ರಜೆ ಮಂಜೂರಾತಿ ಕುರಿತಂತೆ ಕೋರಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಕಂಡ ಅಂಶವು ಸದರಿ ಕಛೇರಿ ಸಿಬ್ಬಂದಿಗಳ ಬೇಜವಾಬ್ದಾರಿತನ ಹಾಗೂ ಕಛೇರಿಯ ಕೆಲಸಗಳ ಬಗ್ಗೆ ಅವರಲ್ಲಿರುವ ಉದಾಸೀನ ಮನೋಭಾವನೆಯನ್ನು ತೋರಿದ್ದು ಕೂಡಲೇ ಸದರಿಯವರನ್ನು ವಲಯದಿಂದ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು, ಸಮಿತಿಯು ವಲಯ ಕಛೇರಿಯಲ್ಲಿರುವ ಸಹಾಯ ಕೇಂದ್ರವನ್ನು ಪರಿಶೀಲಿಸಲಾಗಿ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಚಂದ್ರಶೇಖರ್, ಕಂದಾಯ ವಸೂಲಿಗಾರ ಹಾಗೂ ಶ್ರೀ.ಕಾಂತರಾಜು ಸಬ್ ರಿಜಿಸ್ಟರ್‌ರವರುಗಳು ತಮ್ಮ ಅದೀನದಲ್ಲಿ ಇಬ್ಬರು ಅನಧೀಕೃತ ವ್ಯಕ್ತಿಗಳನ್ನು ತಮ್ಮ ಕಛೇರಿಯಲ್ಲಿ ಕೂರಿಸಿಕೊಂಡು ಕಚೇರಿಯ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿರುವುದು ಕಂಡು ಬಂದಿದ್ದು, ಇದು ಅತಿ ದುರಾದೃಷ್ಟಕರ ಅಂಶವೆಂದು ಸಮಿತಿಯು ಅಭಿಪ್ರಾಯಿಸುತ್ತದೆ. ಜಂಟಿ ಆಯುಕ್ತರ ವಲಯ ಕಛೇರಿಯ ಟಪಾಲನ್ನು ಸ್ವೀಕರಿಸಲು ಶ್ರೀ. ಅಶ್ವಥ್‌ರೆಡ್ಡಿ, 4ನೇ ದರ್ಜೆ ನೌಕರರನ್ನು ನೇಮಿಸಿರುವ ಕ್ರಮವು ಸಹ ಪಾಲಿಕೆಯ ಕಳಂಕಕ್ಕೆ ಕಾರಣವೆಂಬುದನ್ನು ಸಮಿತಿಯು ಸೂಚಿಸ ಬಯಸುತ್ತದೆ. ಈ ಕಛೇರಿಯ ಹಿಂಭಾಗದ ಮೈದಾನದಲ್ಲಿ ಹೊಸದಾದ ಕ್ಯಾಂಟರ್ ವಾಹನವೊಂದು ಸಂಖ್ಯೆ ಕೆಎ-01, ಡಿ-3790 ಅನುಪಯುಕ್ತವಾಗಿ ಬಿದ್ದಿದ್ದು, ಈ ವಾಹನವನ್ನು ಬಿಡಾಡಿ ದನ ಹಿಡಿಯಲು ತಂದಿರುವುದಾಗಿ ತಿಳಿಸಿದ್ದು, ಇದು ಉಪಯೋಗಕ್ಕೆ ಬಾರದೇ ಇದ್ದರೂ ಸಹ ಸಂಬಂಧಪಟ್ಟ ಜಂಟಿ ಆಯುಕ್ತರಾಗಲಿ, ಪಶುಸಂಗೋಪನೆ ಅಧಿಕಾರಿಗಳಾಗಲಿ ಗಮನ ಹರಿಸದೇ ಇರುವುದು ಅತೀ ಶೋಚನೀಯ.

ಕಂದಾಯಾಧಿಕಾರಿ ಕಚೇರಿ ತಪಾಸಣೆ ನಡೆಸಲಾಗಿ ಅವರ ಕಛೇರಿಯಲ್ಲಿದ್ದ ಗಣಕಯಂತ್ರ ಸಹಾಯಕರುಗಳ ಬಳಿ ಹಲವಾರು ಕಡತಗಳು ಸುಮಾರು 2 ತಿಂಗಳುಗಳಿಗೂ ಅಧಿಕವಾಗಿ ವ್ಯವಹರಣೆಯಾಗದೇ ಇದ್ದು, ಈ ಬಗ್ಗೆ ಉಪಸ್ಥಿತರಿದ್ದಂತಹ ಉಪ ಆಯುಕ್ತರು ಸಹ ತಮ್ಮ ಅಸಮಾಧಾನವನ್ನು ಸೂಚಿಸಿ ಕೂಡಲೇ ಸದರಿ ಕಡತಗಳನ್ನು ವಿಲೇವಾರಿ ಮಾಡುವುದಾಗಿ ತಿಳಿಸಿರುತ್ತಾರೆ ಹಾಗೂ ಜಾಹಿರಾತು ನವೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಮನವಿ ಪತ್ರಗಳನ್ನು ಪರಿಶೀಲಿಸುವ ಬಗ್ಗೆ ಯಾವುದೇ ವಿಧವಾದ ಕ್ರಮ ಕೈಗೊಳ್ಳದೇ ಮೂಲೆಯಲ್ಲಿ ಬಿಸಾಡಿರುವ ಕ್ರಮದ ಬಗ್ಗೆ ಸಮಿತಿಯು ತನ್ನ ಅಕ್ರೋಶವನ್ನು ವ್ಯಕ್ತಪಡಿಸುತ್ತಾ ಈ ಬಗೆಗೂ ಸಹ ಉಪ ಆಯುಕ್ತರಿಗೆ ಸಂಬಂಧಿಸಿದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಆದೇಶಿಸಿರುತ್ತದೆ. ಈ ಕಛೇರಿಯ ಹೊರಭಾಗದಲ್ಲಿ ಸಾಕಷ್ಟು ಮಂದಿ ಸಾರ್ವಜನಿಕರಿದ್ದು ಅವರನ್ನು ಯಾವ ಕಾರಣಕ್ಕಾಗಿ ಕಾಯುತ್ತಿರುವುದಾಗಿ ಕೇಳಲಾಗಿ ಅವರುಗಳು ರಸ್ತೆ ಅಗಲೀಕರಣಕ್ಕೆ ಸಂಬಂಧಪಟ್ಟಂತೆ ತಾವು ಸುಮಾರು 6 ರಿಂದ 8 ತಿಂಗಳುಗಳಿಂದ ಬರುತ್ತಿರುವುದಾಗಿಯೂ, ವಿಷಯ ನಿರ್ವಾಹಕರಾದಂತಹ ಶ್ರೀ. ರಾಜುರವರು ಬಹಳ ದೋರಣೆಯಿಂದ ವರ್ತಿಸುತ್ತಿರುವುದೇ ಅಲ್ಲದೇ ಪ್ರತಿ ಭಾರಿಯೂ ವಿನಾಃಕಾರಣ ಇಲ್ಲಸಲ್ಲದ ಲೋಪದೋಷಗಳನ್ನು ತಿಳಿಸಿ ತಮ್ಮ ಮನವಿಯನ್ನು ಪರಿಗಣಿಸುತ್ತಿಲ್ಲವೆಂದು ಅತೀ ಬೇಸರದಿಂದ ತಿಳಿಯ ಪಡಿಸಿದ್ದು, ಈ ಸಂದರ್ಭದಲ್ಲಿ ಸದರಿ ನೌಕರರ ಮೇಜು ಹಾಗೂ ಅಲ್ಮೆರಗಳನ್ನು ಪರಿಶೀಲಿಸಲಾಗಿ ಸಾಕಷ್ಟು ಕಡತಗಳನ್ನು ಯಾವುದೇ ವಿಧವಾದ ಟಿಪ್ಪಣಿ ಇಲ್ಲದೇ ವಿಲೇಇಟ್ಟಿರುವುದು ಸಮಿತಿಯ ಸದಸ್ಯರಾದಂತಹ ಶ್ರೀ. ಅಬ್ದುಲ್ ರಖೀಬ್ ಝೂಕಿಬ್ ರವರಿಗೆ ಕಂಡು ಬಂದಿದ್ದು, ಸದರಿ ಕಡತಗಳನ್ನು ಅಲ್ಮೆರದಿಂದ ತೆಗೆದು ಸಮಿತಿಯು ಪರಿಶೀಲನೆಗೆ ತರಲಾಗಿದ್ದು ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆಯುಕ್ತರ ಸುತ್ತೋಲೆಗಳು ಹಾಗೂ ಅಧಿಕೃತ ಜ್ಞಾಪನಗಳಲ್ಲಿ ವಿವರಿಸಿರುವಂತೆ ನಿಯಮಾನುಸಾರವಾಗಿ ಕಡತಗಳನ್ನು ವ್ಯವಹರಣೆ ಮಾಡದೇ ಇರುವುದು ಕಂಡು ಬಂದಿರುತ್ತದೆ. ಈ ಪ್ರಕರಣದಲ್ಲಿ ಶ್ರೀ. ರಾಜು ಹಂಗಾಮಿ ಕಂದಾಯ ವಸೂಲಿಗಾರ (ಪಂಚಾಯ್ತಿ)ರವರು ಟಿ.ಡಿ.ಆರ್ ವಿಭಾಗದ ವಿಷಯ ನಿರ್ವಾಹಕರಾಗಿ ನಿರ್ವಹಿಸುತ್ತಿರುವ ಕಾರ್ಯವು ಅನಧೀಕೃತವಾಗಿದ್ದು ಹಾಗೂ ಶ್ರೀ. ನಂದೀಶ್ ಪರಿಸರ ಅಭಿಯಂತರರು ರವರು ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಟಿ.ಡಿ.ಆರ್ ನೀಡಲು ಶಿಫಾರಸ್ಸು ಮಾಡುತ್ತಿರುವ ಕ್ರಮವು ನಿಯಮಬಾಹಿರವಾಗಿದ್ದು, ಇದು ಹಲವು ಅನುಮಾನಗಳಿಗೆ ಆಸ್ಪದವನ್ನು ನೀಡುತ್ತದೆ. ಈ ಬಗ್ಗೆ ಸೂಕ್ತ ವಿವರಣೆ ನೀಡಲು ಹಾಜರಿದ್ದ ಉಪ ಆಯುಕ್ತರು ವಿಫಲರಾಗಿರುತ್ತಾರೆ. ಆದ್ದರಿಂದ ಮೇಲ್ಕಂಡ ನೌಕರರುಗಳನ್ನು ಕೂಡಲೇ ಬೇರೆ ವಲಯಕ್ಕೆ ವರ್ಗಾಹಿಸಲು ಆಯುಕ್ತರನ್ನು ಕೋರಲು ಸಮಿತಿಯು ತೀರ್ಮಾನಿಸಲಾಯಿತು.

ಸಹಾಯಕ ನಿಯಂತ್ರಕರು (ಹಣಕಾಸು)ರವರ ಕಛೇರಿಯನ್ನು ಪರಿಶೀಲಿಸಲಾಗಿ ಸಹಾಯಕ ನಿಯಂತ್ರಕರು (ಹಣಕಾಸು)ರವರು, ಕಚೇರಿ ಪ್ರಥಮ ದರ್ಜೆ ಗುಮಾಸ್ತರವರು ಅನಧೀಕೃತವಾಗಿ ಗೈರು ಹಾಜರಾಗಿದ್ದು, ಹಾಜರಾತಿ ಪುಸ್ತಕದಲ್ಲಿ ಪ್ರಥಮ ದರ್ಜೆ ಗುಮಾಸ್ತರ ಹೆಸರಿನ ಮುಂದೆ ರಜೆ ಎಂದು ಗುರುತಿಸಲಾಗಿದ್ದು, ಯಾವುದೇ ವಿಧವಾದ ರಜೆ ಅರ್ಜಿ ಇರುವುದಿಲ್ಲ, ಅದೇ ರೀತಿ ಸಹಾಯಕ ನಿಯಂತ್ರಕರು (ಹಣಕಾಸು)ರವರು ಸಹ ರಜೆ ಅರ್ಜಿಯನ್ನು ಜಂಟಿ ಆಯುಕ್ತರವರಿಗೆ ಸಲ್ಲಿಸಿರುವುದಾಗಿ ತಿಳಿಸಿದ್ದು ದೂರವಾಣಿ ಮುಖಾಂತರ ಜಂಟಿ ಆಯುಕ್ತರನ್ನು ಕೇಳಲಾಗಿ ತಮ್ಮ ಬಳಿ ಯಾರು ರಜೆಗೆ ಮನವಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಿತಿಗೆ ತಪ್ಪು ಮಾಹಿತಿಯನ್ನು ನೀಡಿದ ಲೆಕ್ಕ ಅಧೀಕ್ಷಕರ ಮೇಲೆ ಶಿಸ್ತಿನ ಕ್ರಮ ಜರುಗಿಸತಕ್ಕದ್ದು.

ಸಹಾಯಕ ನಿರ್ದೇಶಕರು (ನಗರ ಯೋಜನೆ) ಕಚೇರಿಗಳನ್ನು ಪರಿಶೀಲಿಸಲಾಗಿ ಕಛೇರಿಯಲ್ಲಿದ್ದ ಯಾವೊಬ್ಬ ಸಿಬ್ಬಂದಿ ವರ್ಗದವರು ಗುರುತಿನ ಚೀಟಿಯನ್ನು ಧರಿಸದೇ ಇರವುದು ಕಂಡುಬಂದಿದ್ದು ಸಮಿತಿಯು ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ ಹಾಗೂ ಸಹಾಯಕ ನಿರ್ದೇಶಕರುಗಳು ಹಳೆಯ ಗುರುತಿನ ಚೀಟಿಗಳನ್ನು ಧರಿಸಿದ್ದು, ಸದರಿ ಗುರುತಿನ ಚೀಟಿಗಳನ್ನು ನವೀಕರಿಸದೆ ಇದ್ದು ಈ ಬಗ್ಗೆ ಹೊಸ ಗುರುತಿನ ಚೀಟಿಗಳನ್ನು ಪಡೆಯುವಂತೆ ಸೂಚಿಸಲಾಯಿತು ಹಾಗೂ ಕಛೇರಿಯಲ್ಲಿದ್ದ ಯಾವ ದಾಖಲಾತಿ ವಹಿಗಳು ಬಟವಾಡೆ ಅಧಿಕಾರಿಗಳಿಂದ ದೃಢೀಕರಸದೆ ಇರುವುದು ಕಂಡು ಬಂದಿದ್ದು ಈ ಬಗ್ಗೆ ಸಮಿತಿಯು ಅಸಮಾಧಾನ ವ್ಯಕ್ತಪಡಿಸಿದ್ದು, ಹಿಂದಿನ ಸ್ಥಾಯಿ ಸಮಿತಿಯು ಈಗಾಗಲೇ ತಪಾಸಣೆ ಕೈಗೊಂಡಿದ್ದು ಮೇಲ್ಕಂಡ ಲೋಪದೋಷಗಳನ್ನು ಸರಿಪಡಿಸುವಂತೆ ವರದಿ ನೀಡಿದ್ದರೂ ಸಹ ತಹಲ್‌ವರೆವಿಗೂ ಯಾವುದೇ ಸುಧಾರಣೆ ಆಗದೇ ಇರುವ ಬಗ್ಗೆ ಸಮಿತಿಯು ತೀವ್ರವಾಗಿ ಖಂಡಿಸುತ್ತಾ, ಮೇಲ್ಕಂಡ ಅಂಶಗಳ ಬಗ್ಗೆ ಕ್ರಮಕೈಗೊಂಡು ಸಮಿತಿಗೆ ವರದಿ ಸಲ್ಲಿಸುವಂತೆ ಉಪ ಆಯುಕ್ತರವರಿಗೆ ಸೂಚಿಸಲಾಯಿತು.

ಸಮಿತಿಯು ತಪಾಸಣೆ ಕೈಗೊಂಡ ನಂತರ ವಲಯದ ಎಲ್ಲಾ ಬಟವಾಡೆ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿದ್ದು ಬೆರಳೆಣಿಕೆಯ ಸಂಖ್ಯೆಯಷ್ಟು ಹಾಜರಿದ್ದ ಅಧಿಕಾರಿಗಳು ತಮಗೆ ವಹಿಸಿರುವ ಕೆಲಸಕಾರ್ಯಗಳ ಬಗ್ಗೆ ಸ್ಪಷ್ಟವಾಗಿ ವಿವರಣೆಯನ್ನು ನೀಡಲು ವಿಫಲರಾಗಿರುತ್ತಾರೆ. ಈ ಕಚೇರಿಯಲ್ಲಿ ಮಂಜೂರಾತಿ ಇಲ್ಲದ ಹುದ್ದೆಗಳಲ್ಲಿಯೂ ಸಹ ಹಲವಾರು ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು ಸದರಿಯವರಿಗೆ ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ವೇತನವನ್ನು ಪಾವತಿಸಲಾಗುತ್ತಿದೆ ಎಂಬ ಬಗ್ಗೆ ಯಾವೊಬ್ಬ ಅಧಿಕಾರಿಯಿಂದಲೂ ಸ್ಪಷ್ಟ ವರದಿ ಇರುವುದಿಲ್ಲ. ಈ ಸಂದರ್ಭದಲ್ಲಿ ಮುಖ್ಯ ಅಭಿಯಂತರವರು ಹೆಚ್ಚುವರಿ ಹುದ್ದೆಗಳನ್ನು ರದ್ದು ಪಡಿಸಬಹುದೆಂತಲು ಈ ಪೈಕಿ ಕಾರ್ಯಪಾಲಕ ಅಭಿಯಂತರರು ಯೋಜನೆ ಹಾಗೂ ಒಂದು ಸಹಾಯಕ ನಿರ್ದೇಶಕರು (ನಗರ ಯೋಜನೆ) ಹುದ್ದೆಯನ್ನು ರದ್ದು ಪಡಿಸುವುದು ಸೂಕ್ತವೆಂದು ತಿಳಿಸಿದ್ದು ಈ ಬಗ್ಗೆ ಕೂಡಲೇ ಈ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ/ಅಧಿಕಾರಿಳ ಪೈಕಿ ಮಂಜೂರಾತಿ ಹುದ್ದೆಗಳೆಷ್ಟು, ಮಂಜೂರಾತಿ ಇಲ್ಲದೇ ಇರುವ ಹುದ್ದೆಗಳ ವಿವರ, ಖಾಲಿ ಹುದ್ದೆಗಳ ವಿವರಗಳನ್ನು ಸಮಿತಿಗೆ ಮಂಡಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಈ ಕಛೇರಿಯಲ್ಲಿ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಯಾವುದೇ ವಿಧವಾದ ಸಮಂಜಸಕರ ವಿವರಣೆಯನ್ನು ನೀಡದೇ ಇರುವುದು ಕಂಡು ಬಂದಿದ್ದು, ಇದು ಸಂಬಂಧಪಟ್ಟವರ ಗುರುತರವಾದ ಆರೋಪವೆಂದರೆ ತಪ್ಪಾಗಲಾರದು, ಕಂದಾಯ ವಸೂಲಾತಿಯಲ್ಲಿಯೂ ಸಹ ಈ ವಲಯ ಕಛೇರಿಯು ಪೂರ್ಣ ಪ್ರಮಾಣದಲ್ಲಿ ವಿಫಲವಾಗಿರುತ್ತದೆ. ಅತಿ ಮುಖ್ಯವಾಗಿ ಕಂಡು ಬಂದ ಲೋಪವೆಂದರೆ ಈ ವಲಯ ಕಛೇರಿಯಲ್ಲಿ 4ನೇ ದರ್ಜೆ ನೌಕರರುಗಳು ಕಂದಾಯ ವಸೂಲಾತಿ ಕಾರ್ಯವನ್ನು ನಿರ್ವಹಿಸುತ್ತಿದ್ದು ಇದು ನಿಯಮಬಾಹಿರವೆಂದರೆ ತಪ್ಪಾಗಲಾರದು, ಈಗಾಗಲೇ ಆಯುಕ್ತರು ಸದರಿ ನೌಕರರುಗಳನ್ನು ಬಿಡುಗಡೆಗೊಳಿಸಿ ಅವರ ಮೂಲ ಹುದ್ದೆಗೆ ಹಿಂತಿರುಗಿಸಲು ಆಧೇಶಿಸಿದ್ದರೂ ಸಹ ಬಟವಾಡೆ ಅಧಿಕಾರಿಗಳು ಗಮನ ಹರಿಸದೇ ಇರವುದು ಖಂಡನೀಯ ಕೂಡಲೇ ಈ ಬಗೆಗೂ ಸಹ ಸೂಕ್ತ ಕ್ರಮಕೈಗೊಳ್ಳಲು ಸಮಿತಿಯು ಆದೇಶಿಸುತ್ತದೆ. ಅನಧೀಕೃತ ಜಾಹಿರಾತು ಫಲಕಗಳನ್ನು ತಡೆಗಟ್ಟುವಲ್ಲಿಯೂ ಸಹ ಅಧಿಕಾರಿಗಳು ಜಾಹಿರಾತುದಾರರೊಂದಿಗೆ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಕಟ್ಟಡದ ಪರಿಸರದ ಶುಚಿತ್ವವನ್ನು ಕಾಪಾಡುವಲ್ಲಿ ವಿಫಲರಾಗಿದ್ದು, ತಳ ಮಹಡಿಯಲ್ಲಿ ದುಸ್ಥಿತಿಯಲ್ಲಿರುವ ವಾಹನಗಳನ್ನು ನಿಲ್ಲಿಸಿದ್ದು, ಕೂಡಲೇ ಇವುಗಳನ್ನು ತೆರವುಗೊಳಿಸಲು ಹಾಗೂ ಶುಚಿತ್ವವನ್ನು ಕಾಪಾಡುವಲ್ಲಿ ಹೆಚ್ಚಿನ ಗಮನ ಹರಿಸುವುದು ಸೂಕ್ತವೆಂದು ಅಭಿಪ್ರಾಯಿಸುತ್ತದೆ.

ಒಟ್ಟಾರೆ ಈ ವಲಯ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳು ನಿಯಮಾನುಸಾರ ಕ್ರಮಕೈಗೊಳ್ಳುವಲ್ಲಿ ಪೂರ್ಣಪ್ರಮಾಣದಲ್ಲಿ ವಿಫಲರಾಗಿ ಪಾಲಿಕೆಗೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟವನ್ನುಂಟು ಮಾಡುತ್ತಿರುವುದು ಸಮಿತಿಗೆ ಕಂಡುಬಂದಿದ್ದು, ಕೂಡಲೇ ಆಯುಕ್ತರು ಎಲ್ಲಾ ಲೋಪದೋಷಗಳನ್ನು ಸರಿಪಡಿಸಲು ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ತೀವ್ರತರನಾದ ಎಚ್ಚರಿಕೆಯನ್ನು ನೀಡಲು ಸಮಿತಿಯು ವಿಷಾದದಿಂದ ತಿಳಿಸಲಿಚ್ಚಿಸುತ್ತದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.

ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
6. *ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
7. *ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
8. *ಕಛೇರಿ ಪ್ರತಿ*

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 25–06–2012ರ ಸೋಮವಾರದಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಕಂದಾಯ ಅಧಿಕಾರಿ ಪದ್ಮನಾಭನಗರ ಹಾಗೂ ಕಂದಾಯ ಅಧಿಕಾರಿ ಬಸವನಗುಡಿ ಕಛೇರಿಯ ಅನಿರೀಕ್ಷಿತ ತಪಾಸಣಾ ವರದಿ

| ಕ್ರ. ಸಂ. | ಹಾಜರಿದ್ದ ಸದಸ್ಯರು (ಶ್ರೀಯುತರುಗಳಾದ) | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1 | ವಿ.ವಾಗೀಶ್ | ಅಧ್ಯಕ್ಷರು | ಕಂದಾಯ ಅಧಿಕಾರಿ, ಪದ್ಮನಾಭನಗರ |
| 2 | ಎನ್. ಶಾಂತಕುಮಾರಿ | ಸದಸ್ಯರು | ಕಂದಾಯ ಅಧಿಕಾರಿ, ಬಸವನಗುಡಿ |
| 3 | ಮೋಹನ್ ಕುಮಾರ್ | ಸದಸ್ಯರು | ವಿಶೇಷ ಅಧಿಕಾರಿ |
| 4 | ನಾಜಿನಿ ಬೇಗಂ | ಸದಸ್ಯರು | ಆಯುಕ್ತರ ಕಛೇರಿ ನೋಡಲ್ ಅಧಿಕಾರಿಗಳು |
| 5 | ಭುವನೇಶ್ವರಿ | ಸದಸ್ಯರು | ಕಾರ್ಯಪಾಲಕ ಅಭಿಯಂತರರು, ಬಸವನಗುಡಿ |
| 6 | ಎಲ್.ನಾಗರತ್ನ | ಸದಸ್ಯರು | |

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಕಂದಾಯ ಅಧಿಕಾರಿ ಪದ್ಮನಾಭನಗರ ಹಾಗೂ ಬಸವನಗುಡಿ ಕಛೇರಿಗೆ ಬೇಟಿ ನೀಡಿದ್ದು, ಕಛೇರಿಯಲ್ಲಿ ಯಾವೊಬ್ಬ ಸಿಬ್ಬಂದಿ ವರ್ಗದವರು ಗುರುತಿನ ಚೀಟಿ ಧರಿಸದೇ ಇರುವುದು, 4ನೇ ದರ್ಜೆ ನೌಕರರು ಸಮವಸ್ತ್ರ ಧರಿಸದೇ ಇರುವುದು ಕಂಡು ಬಂದಿರುತ್ತದೆ.

ಅತಿ ಮುಖ್ಯವಾಗಿ ಈ ಕಛೇರಿಯಲ್ಲಿ ಹಳೆಯ ಕಡತಗಳು, ಹಳೆಯ ಅಲ್ಮೆರಾಗಳು ಅನುಪಯುಕ್ತ ಪೀಠೋಪಕರಣಗಳು ಯತೇಚ್ಚವಾಗಿದ್ದು, ಕಸದ ರಾಶಿಯಂತೆ ಕಂಡು ಬಂದಿದ್ದು, ಶುಚಿತ್ವವನ್ನು ಕಾಪಾಡುವಲ್ಲಿ ಇಲ್ಲಿನ ಅಧಿಕಾರಿಗಳು ವಿಫಲರಾಗಿದ್ದಾರೆಂದರೆ ತಪ್ಪಾಗಲಾರದು, ಈ ಕಂದಾಯ ಅಧಿಕಾರಗಳ ವ್ಯಾಪ್ತಿಗೆ ಬರತಕ್ಕಂತಹ 4 ಜನ ಸಹಾಯಕ ಕಂದಾಯ ಅಧಿಕಾರಿಗಳಿದ್ದು ಇವರುಗಳ ಅಧೀನ ಸಿಬ್ಬಂದಿಗಳಾದ 4 ಜನ ವ್ಯವಸ್ಥಾಪಕರುಗಳು ಕಛೇರಿ ಕೆಲಸಕಾರ್ಯಗಳ ಬಗ್ಗೆ ಯಾವುದೇ ವಿಧವಾದ ಆಸಕ್ತಿ ಇಲ್ಲದೇ ಇರುವುದರಿಂದ ಹಾಗೂ 4ನೇ ದರ್ಜೆ ನೌಕರರುಗಳಿಂದ ಕಛೇರಿಯ ಆವರಣ ಮತ್ತು ಪರಿಸರವನ್ನು ಶುಭ್ರವಾಗಿ ಇಟ್ಟುಕೊಳ್ಳುವಲ್ಲಿ ವಿಫಲರಾಗಿರುವುದೇ ಅಲ್ಲದೇ ಕಛೇರಿಯ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಸಹ ಇವರುಗಳಿಂದ ಸಾಧ್ಯವಿಲ್ಲದೇ ಇರುವುದು ಹಾಗೂ ಈ ಸಿಬ್ಬಂದಿಗಳು ಗುರುತಿನ ಚೀಟಿಯನ್ನು ಧರಿಸದೇ ಇದ್ದು ಇವರು ಈ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಅಸಮರ್ಥರಾಗಿರುವುದರಿಂದ ಇವರುಗಳನ್ನು ಸಾರ್ವಜನಿಕ ಸಂಪರ್ಕವಿಲ್ಲದ ಸ್ಥಳಕ್ಕೆ ವರ್ಗಾಹಿಸುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ಕಛೇರಿಗಳಲ್ಲಿ ಹಾಜರಾತಿ ಪುಸ್ತಕವಾಗಲೀ ಅಥವಾ ಯಾವುದೇ ದಾಖಲಾತಿ ವಹಿಗಳಾಗಲಿ ಇಲಾಖಾ ಮುಖ್ಯಸ್ಥರಿಂದ ದೃಢೀಕೃತವಾಗದೇ ಇರುವುದು ಶೋಚನೀಯ. ಸಾರ್ವಜನಿಕರಿಗೆ ಈ ಕಚೇರಿಯಲ್ಲಿ ಸಮರ್ಪಕವಾದ ರೀತಿಯಲ್ಲಿ ಅವರುಗಳ ಮನವಿ ಕುರಿತಂತೆ ಕಾರ್ಯನಿರ್ವಹಿಸುವಲ್ಲಿಯೂ ಸಹ ಈ ಕಚೇರಿಗಳು ಪೂರ್ಣ ಪ್ರಮಾಣದಲ್ಲಿ ವಿಫಲವಾಗಿರುತ್ತವೆ. ಹಾಜರಾತಿ ಪುಸ್ತಕದ ನಿರ್ವಹಣೆಯು ಸಹ ನಿಯಮಬಾಹಿರವಾಗಿದ್ದು ಸಮಿತಿಯು ತಪಾಸಣೆಗೆ ಹೋದ ಸಂದರ್ಭದಲ್ಲಿ ಅನಧಿಕೃತವಾಗಿ ಗೈರುಹಾಜರಾಗಿದ್ದ ಸಿಬ್ಬಂದಿಗಳ ಹೆಸರಿನ ಮುಂದೆ ಅವರುಗಳ ರಜೆ ಚೀಟಿ ಸಲ್ಲಿಸದಿದ್ದಾಗ್ಯೂ ಸಹ ರಜೆ ಎಂದು ನಮೂದಿಸಿರುವ ಕ್ರಮವು ನಿಯಮಬಾಹಿರವಾಗಿದ್ದು ಇತಂಹ ಕೃತ್ಯಗಳಿಗೆ ಕಾರಣರಾದಂತಹ ಸಿಬ್ಬಂದಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು, ಸಮಿತಿಯು ಕಛೇರಿಯಲ್ಲಿ ಹಾಜರಿದ್ದಂತಹ ಕಂದಾಯ ವಸೂಲಿಗಾರರ ಕಿರ್ದಿ ಪುಸ್ತಕಗಳನ್ನು ಪರಿಶೀಲಿಸಲಾಗಿ ಕಂದಾಯ ವಸೂಲಿಗಾರರು ಆಸ್ತಿ ತೆರಿಗೆಯ ಚೆಕ್/ಡಿ.ಡಿಗಳನ್ನು ಬ್ಯಾಂಕ್‌ಗೆ ಜಮೆ ಮಾಡಿರುವ ಕುರಿತಂತೆ ಅಗತ್ಯ ದಾಖಲೆಗಳನ್ನು ಕಿರ್ದಿ ಪುಸ್ತಕದಲ್ಲಿ ದಾಖಲಿಸಿರುವುದಿಲ್ಲ ಮತ್ತು ಈ ಬಗ್ಗೆ ಸಮಂಜಸವಾದ ವಿವರಣೆ ನೀಡಲು ವಿಫಲರಾಗಿರುತ್ತಾರೆ ಹಾಗೂ ಎಲ್ಲಾ ಕಂದಾಯ ವಸೂಲಿಗಾರರು ಬ್ಯಾಂಕಿಗೆ ಜಮೆ ಮಾಡುವ ಮುಂಚಿತವಾಗಿ ಕಛೇರಿ ಕೈಪಿಡಿ ರೀತ್ಯಾ ಅವರುಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ನಿರ್ವಹಿಸದೇ ಪೂರ್ಣ

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಮಾಣದಲ್ಲಿ ವಿಫಲರಾಗಿರುತ್ತಾರೆ. ಈ ವಲಯದಲ್ಲಿ ಕಿರಿಯ ಸಿಬ್ಬಂದಿ ವರ್ಗದವರ ಮೇಲೆ ಹಿರಿಯ ಸಿಬ್ಬಂದಿಗಳ ನಿಯಂತ್ರಣವು ಇಲ್ಲದೇ ಇರುವುದರಿಂದ ಪಾಲಿಕೆಯ ಕೆಲಸ ಕಾರ್ಯಗಳು ನಿರಂತರವಾಗಿ ವಿಫಲವಾಗುತ್ತಿರುವುದಕ್ಕೆ ಉದಾಹರಣೆ ಅಂಶವಾಗಿದೆ. ಕಛೇರಿಯ ವ್ಯವಸ್ಥಾಪಕರಾಗಲಿ, ಸಹಾಯಕ ಕಂದಾಯ ಅಧಿಕಾರಿಗಳಾಗಲಿ ತಮ್ಮ ನಿಯಂತ್ರಣಕ್ಕೆ ಬರುವ ಸಿಬ್ಬಂದಿಗಳ ಬಗ್ಗೆ ಸೂಕ್ತ ಗಮನ ಹರಿಸದೇ ಇದ್ದು ಅವರಗಳ ಕರ್ತವ್ಯ ಲೋಪಕ್ಕೆ ಪೂರ್ಣಪ್ರಮಾಣದಲ್ಲಿ ಸಹಕಾರ ನೀಡಿರುತ್ತಾರೆ. ಈ ವಲಯದಲ್ಲಿ 4 ಸಹಾಯಕ ಕಂದಾಯ ಅಧಿಕಾರಗಳ ಕಛೇರಿಗಳಿದ್ದು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯನಿರ್ವಾಹಕ ಸಿಬ್ಬಂದಿಗಳು ಸರದಿಯ ಪ್ರಕಾರ ಇದೇ ವಲಯದ ಇತರೆ ಕಛೇರಿಗಳಿಗೆ ವರ್ಗಾವಣೆ ಹೊಂದುತ್ತಿದ್ದು, ಕನಿಷ್ಟ ಪಕ್ಷ 10 ವರ್ಷಗಳಿಗೂ ಅಧಿಕವಾಗಿ ಇದೇ ವಲಯದಲ್ಲಿಯೇ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಕೂಡಲೇ ಇವರುಗಳನ್ನು ಈ ವಲಯದಿಂದ ಇತರೆ ವಲಯಕ್ಕೆ ವರ್ಗಾವಣೆ ಮಾಡಲು ಆಯುಕ್ತರು ತುರ್ತು ಕ್ರಮ ಕೈಗೊಳ್ಳಲು ಕೋರಿದೆ. ಈ ಕಛೇರಿಯಲ್ಲಿ ಹಳೆ ಕಡತಗಳನ್ನು ಸಂರಕ್ಷಿಸಲು ಅಭಿಲೇಖಾಲಯ ಇಲ್ಲದೇ ಇರುವುದು ಸಹ ಶೋಚನೀಯವಾಗಿದೆ. ಈ ವಲಯ ಕಛೇರಿಯಲ್ಲಿ ಮಹಿಳಾ ಸಿಬ್ಬಂದಿಗಳಿಗೆ ಶೌಚಾಲಯ ವ್ಯವಸ್ಥೆ ಇಲ್ಲದೇ ಇದ್ದು ಹಾಗೂ ಹಾಲಿ ಇರುವ ಶೌಚಾಲಯಗಳು ಪೂರ್ಣಪ್ರಮಾಣದಲ್ಲಿ ದುಸ್ಥಿತಿಯಲ್ಲಿದ್ದು, ಇದು ಈ ಭಾಗದ ಅಧಿಕಾರಗಳ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಕಂದಾಯ ವಸೂಲಾತಿ ಕಾರ್ಯ, ತಿರಸ್ಕೃತಗೊಂಡ ಚೆಕ್‌ಗಳ ಬಗ್ಗೆ ಯಾವುದೇ ವಿಧವಾದ ಶಿಸ್ತಿನಕ್ರಮ ಜರುಗಿಸದೇ ಇರುವುದು ಕಂಡುಬಂದಿದ್ದು ಇದು ಕಂದಾಯ ವಸೂಲಿಗಾರರ ಕರ್ತವ್ಯ ಲೋಪವಾಗಿದ್ದು ಇವರುಗಳ ಮೇಲೆ ಸಿ.ಸಿ.ಎ ನಿಯಮಗಳ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳುವಂತೆ ಆಯುಕ್ತರನ್ನು ಕೋರಲು ಸಮಿತಿಯು ಅಭಿಪ್ರಾಯಿಸುತ್ತದೆ.

ಈ ವಲಯ ಕಛೇರಿಗಳಲ್ಲಿ ಅಶುಚಿತ್ವವು ತಾಂಡವವಾಡುತ್ತಿದ್ದು ಈ ವಾತಾವರಣವನ್ನು ಸರಿಪಡಿಸುವಲ್ಲಿ ಯಾವೊಬ್ಬ ಸಿಬ್ಬಂದಿವರ್ಗದವರು ಕ್ರಮ ಕೈಗೊಳ್ಳದೇ ಇರುವುದು ಅವರುಗಳ ಬೇಜವಾಬ್ದಾರಿಯನ್ನು ಎತ್ತಿ ತೋರುತ್ತದೆ.

ಒಟ್ಟಾರೆಯಾಗಿ ಹಿರಿಯ ಅಧಿಕಾರಿಗಳು ತಮ್ಮ ಅಧೀನ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಪೂರ್ಣಪ್ರಮಾಣದಲ್ಲಿ ವಿಫಲರಾಗಿದ್ದು, ಅವರಿಗೂ ಸಹ ತೀವ್ರವಾದ ಎಚ್ಚರಿಕೆಯನ್ನು ನೀಡಿ ಅಧೀನ ಸಿಬ್ಬಂದಿಗಳ ಮೇಲೆ ಹತೋಟಿ ಹೊಂದಲು ತಿಳಿಸಲಾಗಿರುತ್ತದೆ ಹಾಗೂ ಸಂಬಂಧಪಟ್ಟ ಅಭಿಯಂತರರುಗಳಿಗೆ ಎಚ್ಚರಿಕೆಯನ್ನು ನೀಡಿ ಸದರಿ ಕಟ್ಟಡದಲ್ಲಿ ಅಗತ್ಯ ಸೌಲಭ್ಯ ಹಾಗೂ ದುರಸ್ಥಿ ಕಾರ್ಯಗಳನ್ನು ಶೀಘ್ರವಾಗಿ ನಿರ್ವಹಿಸಲು ಸೂಚಿಸುತ್ತಾ ತಪಾಸಣೆಯನ್ನು ಪೂರ್ಣಗೊಳಿಸಲಾಗಿರುತ್ತದೆ.

ಅಧ್ಯಕ್ಷರು
*ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿ,*
*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.*

ಪ್ರತಿಯನ್ನು:

1. *ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ*
2. *ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಅಪ್ತ ಸಹಾಯಕರವರಿಗೆ ಕಳುಹಿಸಿದೆ*
3. *ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.*
4. *ಮಾನ್ಯ ಆಯುಕ್ತರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
5. *ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
6. *ಜಂಟಿ ಆಯುಕ್ತರು, ದಕ್ಷಿಣ ವಲಯ/ಕಂದಾಯ ಅಧಿಕಾರಿಗಳು ಪದ್ಮನಾಭನಗರ/ ಕಂದಾಯ ಅಧಿಕಾರಿಗಳು ಬಸವನಗುಡಿ ರವರುಗಳಿಗೆ ಕಳುಹಿಸುತ್ತಾ ಮೇಲೆ ಸೂಚಿಸಿರುವ ಲೋಪದೋಷಗಳನ್ನು ಸರಿಪಡಿಸಿ ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ.*
7. *ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ,*
8. *ಕಛೇರಿ ಪ್ರತಿ*